

ما يستفاد من المحن والحوادث
ಐಹಿಕ ಜೀವನದ
ಸಂಕಷ್ಟಗಳು
ವಾಸ್ತವಿಕತೆ
ಕಾರಣಗಳು
ಒಳಿತುಗಳು
ದುಃಖಿತ ಹೃದಯಗಳಿಗೆ
ಸಮಾಧಾನ
ವಿಷಯ ಸಂಗ್ರಹಣೆ: ಶವಾನ ಅಬ್ದುಲ್‌ಅಝೀಝ್
ಅನುವಾದ: ಮುಹಮ್ಮದ್ ಹಾರಿಸ್ ನಂದಾವರ
Published by Quran Sunnah Educational Programs
www.qsep.com

# ಐಹಿಕ ಜೀವನದ ಸಂಕಷ್ಟಗಳು

ವಾಸ್ತವಿಕತೆ
ಕಾರಣಗಳು
ಒಳಿತುಗಳು

ದುಃಖಿತ ಹೃದಯಗಳಿಗೆ
ಸಮಾಧಾನ

ವಿಷಯ ಸಂಗ್ರಹಣೆ: ಶವಾನ ಅಬ್ದುಲ್‌ಅಝೀಝ್
ಅನುವಾದ: ಮುಹಮ್ಮದ್ ಹಾರಿಸ್ ನಂದಾವರ

Published by Quran Sunnah Educational Programs
www.qsep.com

**Distributors**

**Manhaj-Al-Ambiya Call and Guidance Centre**
C-31, IInd Floor, Al-Rahaba Plaza, Nellikai Road, Mangalore.
Tel : 824 4282220.

**Manhaj-Al-Ambiya, CD/DVD and Book Store**
Near Ibrahim Kaleel Masjid, Nellikai Road, Mangalore
Tel: 824 4263068

email: sksmlibrary@gmail.com

# ಪುಸ್ತಕ ಕ್ರಮಣಿಕೆ


ಪುಸ್ತಕದ ಕುರಿತು------------------------------01

ಐಹಿಕ ಜೀವನ ಒಂದು ಪರೀಕ್ಷೆ---------------------03

ಅಲ್ಲಾಹನ ನಿರ್ಣಯದಲ್ಲಿ ಸಂಪೂರ್ಣ ಭರವಸೆ--------------05

ನಿನ್ನೊಂದಿಗೆ ಸಂಭವಿಸಿರುವುದನ್ನು ತಪ್ಪಿಸಲು ಸಾಧ್ಯವಿರಲಿಲ್ಲ--------10

ಅನುಗ್ರಹ ದುಃಖಗಳ ಸ್ವರೂಪದಲ್ಲಿ---------------------14

ವಿಪತ್ತನ್ನು ಆಶಿಸುವುದು ವಿಶ್ವಾಸಿಗೆ ಸಲ್ಲ--------------------19

ಅಲ್ಲಾಹು ನಿಶ್ಚಿಂತತೆಯನ್ನು ದಯೆಪಾಲಿಸಿದರೆ---------------22

ಅನುಗ್ರಹ ಅಥವಾ ಶಿಕ್ಷೆ --------------------------24

ಅಲ್ಲಾಹನ ತೃಪ್ತಿ ಹಾಗೂ ಅನುಗ್ರಹದ ಗಳಿಕೆಗಾಗಿ

ಸಬ್ರ್ -------------------------------------25

ಇಹ್ತಿಸಾಬ್ ----------------------------------28

ಇಸ್ತಿರ್ಜಾ ----------------------------------30

ಶಕ್ವಾ -------------------------------------33

ಐಹಿಕ ಸಂಕಷ್ಟಗಳ ಮತ್ತೊಂದು ಮಗ್ಗಲು -----------------35

ಸಂಕಷ್ಟಗಳನ್ನು ನೀಗಿಸಲು ಪ್ರಾರ್ಥನೆ ಕೇವಲ ಅಲ್ಲಾಹನೊಂದಿಗೆ-----39

ಪರೀಕ್ಷೆ ಮತ್ತು ಶಿಕ್ಷೆಯ ನಡುವೆ ವ್ಯತ್ಯಾಸ ಗುರುತಿಸುವಿಕೆ ---------45

ಸದಾ ನೆನಪಿಡು -----------------------------------47

بِسْمِ ٱللَّهِ ٱلرَّحْمَٰنِ ٱلرَّحِيمِ

# ಪುಸ್ತಕದ ಕುರಿತು

ಕಷ್ಟ ವಿಷಮತೆಗಳೆಂಬುದು ನಮ್ಮ ಐಹಿಕ ಜೀವನದಲ್ಲಿ ನಮಗೆ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲದಂತಹ ಒಂದು ಅಂಶವಾಗಿದೆ. ಸಣ್ಣಪುಟ್ಟ ಸಮಸ್ಯೆಗಳಿಂದ ಪ್ರಾರಂಭಿಸಿ ಮಾರಕರೋಗಗಳು, ಪ್ರೀತಿಪಾತ್ರರ ಮರಣದವರೆಗೆ ಹಲವಾರು ತರಹದ ಕ್ಲಿಷ್ಟತೆಗಳನ್ನು ನಾವು ಈ ವ್ಯಾಪ್ತಿಯಲ್ಲಿ ಎಣಿಸಬಹುದು.ಸಮಸ್ಯೆಗಳನ್ನು ತಕ್ಕ ರೀತಿಯಲ್ಲಿ ಅರ್ಥೈಸಿ ಯುಕ್ತ ದೃಷ್ಟಿಕೋನದೊಂದಿಗೆ ಸಮೀಪಿಸಿ ಅಲ್ಲಾಹನ ಇಚ್ಛೆಯ ಮೇಲೆ ಸಂಪೂರ್ಣ ಭರವಸೆನ್ನಿಟ್ಟು "ಅಲ್-ಖದಾ ವಲ್-ಖದ್ರ್" (ವಿಧಿಲಿಖಿತ) ಇದರ ಶ್ರೇಷ್ಠ ನಿಯಮವೊಂದನ್ನು ಅರಿತುಕೊಳ್ಳಲು ಈ ಕಿರುಪುಸ್ತಕ ನಿಮಗೆ ಸಹಕರಿಸಲಿದೆ. ಆ ನಿಯಮವೇನೆಂದರೆ "ನಿನ್ನೊಂದಿಗೆ ಏನೆಲ್ಲಾ ಸಂಭವಿಸಿದೆಯೊ ಅದನ್ನು (ಸಂಭವಿಸುವುದರಿಂದ) ತಪ್ಪಿಸಲು ಸಾಧ್ಯವಿರಲಿಲ್ಲ."

ಜೀವನದಲ್ಲಿ ಕಷ್ಟಕಾರ್ಪಣ್ಯಗಳೆಂಬುದು ವಿಶ್ವಾಸಿಗಳಿಗೆ ಪರೀಕ್ಷೆಯಾಗಿದೆ ಎಂಬುದನ್ನು ಈ ಪುಸ್ತಕವು ವಾಚಕರಿಗೆ ನೆನಪಿಸಲಿದೆ. ಅದರೊಂದಿಗೆ ಮರೆಯಬಾರದಂತಹ ವಿಷಯವೊಂದನ್ನು ಕೂಡ. ಅದೇನೆಂದರೆ ಮನುಷ್ಯನೊಬ್ಬನು ಅನುಭವಿಸುವ ನಿರಂತರ ಕ್ಲೇಶಗಳು ಅವನು ಅಲ್ಲಾಹನ ಆಜ್ಞೆಗೆ ವಿರುದ್ಧವಾಗಿ ವರ್ತಿಸಿ ಸಂಪಾದಿಸಿಟ್ಟ ಪಾಪ ಅರ್ಥಾತ್ ಅಲ್ಲಾಹನ ಆಜ್ಞೋಲ್ಲಂಘನೆಯ ಫಲಿತಾಂಶವಾಗಿದೆ.

ಯುಕ್ತ ನಡವಳಿಕೆ ಮತ್ತು ಶಾಂತ, ದೃಢಮನೋಭಾವದ ಮೂಲಕ

ವಿಪತ್ತುಗಳನ್ನು ನಿಭಾಯಿಸಿದರೆ ಅದು ಅಲ್ಲಾಹನ ಪ್ರೀತಿಯನ್ನು ಸಂಪಾದಿಸುವ ಉತ್ತಮ ಅವಕಾಶವನ್ನು ನಮಗೆ ಒದಗಿಸುತ್ತದೆ. ಸಬ್ರ್ (ತಾಳ್ಮೆ), ಶುಕ್ರ್ (ಕೃತಜ್ಞತೆ), ಇಹ್ತಿಸಾಬ್ (ಪ್ರತಿಫಲಾಪೇಕ್ಷೆ), ಇಸ್ತಿರ್ಜಾ (ಅಲ್ಲಾಹನತ್ತ ಮರಳಬೇಕಾದ ನೆನಪು)ಗಳ ಮೂಲಕ ಇದನ್ನು ನಾವು ಸಾಧಿಸಬಹುದಾಗಿದೆ. ಅಸಹನೆ, ಗಾಬರಿ, ಆಕ್ಷೇಪಣೆಗಳು ಮನುಷ್ಯನ ಸ್ಥಿತಿಯನ್ನು ಮತ್ತಷ್ಟು ಜಟಿಲವಾಗಿಸುತ್ತದೆ ಎಂಬುವುದನ್ನು ಈ ಪುಸ್ತಕವು ನಿಮಗೆ ನೆನಪಿಸಲಿದೆ. ಅಂತಿಮವಾಗಿ ಈ ಪುಸ್ತಕವು ಪ್ರವಾದಿಗಳೊಂದಿಗೆ, ಮೃತ ಮಹಾತ್ಮರೊಂದಿಗೆ ಕಷ್ಟಗಳನ್ನು ದೂರೀಕರಿಸಲು ಮಾಡುವ ಪ್ರಾರ್ಥನೆಯ ನಿರರ್ಥಕತೆಯನ್ನು ಮನದಟ್ಟುಮಾಡಿಸಿ ಸಮಸ್ಯೆಗಳಿಂದ ಮುಕ್ತಿ ಪಡೆಯುವ ಏಕೈಕ ಮಾರ್ಗ ಸರ್ವಶಕ್ತನಾದ ಅಲ್ಲಾಹನಲ್ಲಿ ಮಾತ್ರ ಪ್ರಾರ್ಥಿಸುವುದಾಗಿದೆ ಎಂಬುವುದನ್ನು ಕೂಡ ಸವಿಸ್ತಾರವಾಗಿ ವಿವರಿಸಲಿದೆ.

ಈ ಪುಸ್ತಕವು ಜೀವನದಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ನಿಭಾಯಿಸಲು ಹೆಣಗಾಡುತ್ತಿರುವ ಜನರಿಗೆ ಶಾಂತಿ ಮತ್ತು ಸಮಾಧಾನಗಳನ್ನು ತುಂಬಿ ಸಂತೃಸಲಿದೆ ಎಂಬ ಆಶಾಭಾವನೆ ನನಗಿದೆ. ಈ ವಿನಮ್ರ ಪ್ರಯತ್ನವನ್ನು ಸರ್ವಶಕ್ತನಾದ ಅಲ್ಲಾಹನು ಸ್ವೀಕರಿಸುವಂತಾಗಲಿ ಎಂಬುದು ನನ್ನ ವಿನಮ್ರ ಪ್ರಾರ್ಥನೆ. ಎಲ್ಲಾ ರೀತಿಯ ಯಶಸ್ಸು ಅಲ್ಲಾಹನ ಕಡೆಯಿಂದ ಮಾತ್ರವಾಗಿದೆ.

*ಶವಾನ ಅಬ್ದುಲ್ ಅಝೀಝ್*

# ಇಹಲೋಕದ ಜೀವನ ಒಂದು ಪರೀಕ್ಷೆ

**ಅವಿಶ್ವಾಸಿಗಳು ಜೀವನದ ವ್ಯಥೆಗಳನ್ನು ಬರಿಯ ತೊಂದರೆಯುತ ಅಥವಾ ಕಷ್ಟಕರ ಜೀವನವೆನ್ನುವ ದೃಷ್ಟಿಯಲ್ಲಿ ಮಾತ್ರ ವೀಕ್ಷಿಸುತ್ತಾರೆ. ಆದರೆ ವಿಶ್ವಾಸಿಗಳಿಗೆ ಸಂಕಷ್ಟಗಳೆಂಬುದು ಒಂದು ಪರೀಕ್ಷೆ. ಮಾತ್ರವಲ್ಲ ತನ್ನ ಒಡೆಯನೊಂದಿಗಿನ ಕರಾರನ್ನು ಇನ್ನಷ್ಟು ದೃಢಗೊಳಿಸಲು ಸಾಧ್ಯವಾಗುವಂತಹ ಸುವರ್ಣಾವಕಾಶ. ಉನ್ನತನಾದ ಅಲ್ಲಾಹನು ತನ್ನ ದಾಸರನ್ನು ವಿಪತ್ತುಗಳು ಮತ್ತು ಅನುಗ್ರಹಗಳ ಮೂಲಕ ಪರೀಕ್ಷಿಸುತ್ತಾನೆ. ವಿಶ್ವಾಸಿಯೊಬ್ಬ ತನಗೆರಗುವ ವಿಪತ್ತುಗಳನ್ನು ತಾಳ್ಮೆಯಿಂದ ಸಹಿಸಿಕೊಂಡರೆ ಕರುಣಾಮಯಿಯಾದ ಅಲ್ಲಾಹನು ಅವನ(ಳ)ನ್ನು ಧಾರಾಳವಾಗಿ ಪುರಸ್ಕರಿಸುವನು, ಮಾತ್ರವಲ್ಲ ಅವನ ಪಾಪಗಳನ್ನು ಅಳಿಸಿ ಅವನ(ಳ)ನ್ನು ಸ್ವರ್ಗದಲ್ಲಿ ಉನ್ನತ ದರ್ಜೆಗೇರಿಸುವನು.**

﴿ وَلَنَبۡلُوَنَّكُم بِشَيۡءٖ مِّنَ ٱلۡخَوۡفِ وَٱلۡجُوعِ وَنَقۡصٖ مِّنَ ٱلۡأَمۡوَٰلِ وَٱلۡأَنفُسِ وَٱلثَّمَرَٰتِۗ
وَبَشِّرِ ٱلصَّٰبِرِينَ ١٥٥ ٱلَّذِينَ إِذَآ أَصَٰبَتۡهُم مُّصِيبَةٞ قَالُوٓاْ إِنَّا لِلَّهِ وَإِنَّآ إِلَيۡهِ رَٰجِعُونَ ١٥٦
أُوْلَٰٓئِكَ عَلَيۡهِمۡ صَلَوَٰتٞ مِّن رَّبِّهِمۡ وَرَحۡمَةٞۖ وَأُوْلَٰٓئِكَ هُمُ ٱلۡمُهۡتَدُونَ ١٥٧ ﴾

**"ಶತ್ರುವಿನ ಭಯ, ಹಸಿವು, ದಾಹ, ಸೊತ್ತು, ಜೀವ ಹಾಗೂ ಸಂಪನ್ಮೂಲಗಳ ಅಭಾವ ಮುಂತಾಗಿ ಒಂದಲ್ಲ ಒಂದು ರೀತಿಯಲ್ಲಿ ನಾವು ನಿಮ್ಮನ್ನು ಖಂಡಿತ ಪರೀಕ್ಷೆಗೊಳಪಡಿಸಲಿದ್ದೇವೆ ಮತ್ತು ಆ ಸಹನಾಶೀಲರಿಗೆ (ಓ ಪ್ರವಾದಿಯವರೇ) ನೀವು ಶುಭವಾರ್ತೆಯನ್ನು ನೀಡಿರಿ.**

ಅವರ್ಯಾರೆಂದರೆ ತಮಗೆ ಸಂಕಷ್ಟಗಲೊದಗಿಲಾಗಲೆಲ್ಲ ಅವರು ಹೇಳುವರು, 'ನಿಶ್ಚಯವಾಗಿಯೂ ನಾವು ಅಲ್ಲಾಹನ ಒಡೆತನದಲ್ಲಿರುವವರು ಮತ್ತು ನಿಶ್ಚಯವಾಗಿಯೂ ನಾವು ಅವನ ಕಡೆಗೇ ಮರಳುವವರಾಗಿದ್ದೇವೆ'. ಅವರ ಮೇಲೆ ಅವರ ಪ್ರಭುವಿನ ಅಪಾರ ಕಾರುಣ್ಯ ಮತ್ತು ಅನುಗ್ರಹಗಳಿರುವುವು ಮತ್ತು ಅವರು ಸನ್ಮಾರ್ಗವನ್ನು ಪಡೆದವರ ಪೈಕಿಯಲ್ಲಾಗಿರುವರು"
{ಸೂರಃ ಬಕರ: 155-157}

ಆದರೆ ಮತ್ತೊಂದೆಡೆ ಅವಿಶ್ವಾಸಿಗಳು ನಿಶ್ಚಯವಾಗಿಯೂ ನಷ್ಟದಲ್ಲಿದ್ದಾರೆ. ಯಾಕೆಂದರೆ ಅವರು ತಮ್ಮ ಅವಿರತ ಶ್ರಮ ಮತ್ತು ಸಂಯಮಕ್ಕೆ ಯಾವುದೇ ನಿರೀಕ್ಷೆಯನ್ನು ಇಟ್ಟುಕೊಳ್ಳಲಾರರು. ಅಲ್ಲಾಹನು ಪವಿತ್ರ ಕುರ್‌ಆನಿನಲ್ಲಿ ಹೇಳುತ್ತಾನೆ:

﴿ إِن تَكُونُواْ تَأْلَمُونَ فَإِنَّهُمْ يَأْلَمُونَ كَمَا تَأْلَمُونَ
وَتَرْجُونَ مِنَ ٱللَّهِ مَا لَا يَرْجُونَ ۗ وَكَانَ ٱللَّهُ عَلِيمًا حَكِيمًا ﴿١٠٤﴾ ﴾

"ನೀವು ಅಸ್ವಸ್ಥತೆಯಿಂದ ಬಳಲುತ್ತಿರುವಿರಾದರೆ ಅವರು ಸಹ ನಿಮ್ಮಂತೆಯೇ ಅಸ್ವಸ್ಥತೆಯಿಂದ ಬಳಲುತ್ತಿದ್ದಾರೆ, ಮತ್ತು ನೀವು ಅಲ್ಲಾಹನಿಂದ ಯಾವುದರ ನಿರೀಕ್ಷೆಯಲ್ಲಿದ್ದೀರೋ (ಸ್ವರ್ಗ) ಅದರ ನಿರೀಕ್ಷೆ ಅವರಿಗಿಲ್ಲ"{ಸೂರಃ ಅನ್ನಿಸಾ:104}

ಅಲ್ಲಾಹನ ಗ್ರಂಥ ಮತ್ತು ಅವನ ಪ್ರವಾದಿವರ್ಯ(ﷺ)ರವರ ಮಾರ್ಗದರ್ಶನದ ಬೆಳಕಿನಲ್ಲಿ ಸಮಾಧಾನಪೂರ್ವಕ ಮತ್ತು ಯುಕ್ತ ಮನೋಭಾವದಿಂದ ವಿಶ್ವಾಸಿಯೊಬ್ಬ ಯಾವರೀತಿ ಸಂಕಷ್ಟಗಳಿಂದ ಹೆಚ್ಚಿನ ಲಾಭವನ್ನು ಪಡೆಯಬಹುದೆಂದು ಪುಸ್ತಕದ ಮುಂದಿನ ಪುಟಗಳು ಸ್ಪಷ್ಟಪಡಿಸಲಿವೆ.

# ಅಲ್ಲಾಹನ ನಿರ್ಣಯದಲ್ಲಿ ಸಂಪೂರ್ಣ ಭರವಸೆ

ಒಳಿತು ಅಥವಾ ಕೆಡುಕು, ಸುಖ ಅಥವಾ ದುಃಖ ಅಲ್ಲಾಹನು ದಾಸನೊಬ್ಬನಿಗೆ ಅವನ ವಿಧಿಯ ಭಾಗವಾಗಿ ನಿರ್ಣಯಿಸಿದರೆ ಅದು ಆ ದಾಸನ ಹಿತದ ದೃಷ್ಟಿಯಿಂದಾಗಿದೆ ಎಂದು ವಿಶ್ವಾಸವನ್ನಿಡುವುದು ಮುಸ್ಲಿಮನೊಬ್ಬನ ಮತವಿಶ್ವಾಸ (ಈಮಾನ್)ದ ಸಮಗ್ರ ಭಾಗವಾಗಿದೆ. ಅಲ್ಲಾಹನ ಪ್ರವಾದಿ(ﷺ) ಹೇಳಿದರು, "ನನ್ನಾತ್ಮವು ಯಾರ ಕೈಯಲ್ಲಿದೆಯೋ ಅವನಾಣೆ, ಅಲ್ಲಾಹನು ಒಬ್ಬ ಸತ್ಯವಿಶ್ವಾಸಿಯ ಪಾಲಿಗೆ ಏನನ್ನು ವಿಧಿಸಿದರೂ ಅದು ಅವನಿಗೆ ಒಳಿತಾಗಿರುತ್ತದೆ. ಇದು (ಈ ಒಳಿತು) ಸತ್ಯವಿಶ್ವಾಸಿಗಳಿಗೆ ಹೊರತು ಇನ್ನಾರಿಗೂ ದಕ್ಕದು."{ಸಹೀಹ್ ಮುಸ್ಲಿಮ್}

ನಾವು ಅಭಿಮುಖೀಕರಿಸುವ ಪ್ರತಿಯೊಂದು ಕ್ಲೇಶೆ, ವ್ಯಥೆಯ ಹಿಂದಿರುವ ವಿಧಿಕರ್ತನ ದಿವ್ಯಜ್ಞಾನವನ್ನು ಸಂಪೂರ್ಣವಾಗಿ ಗ್ರಹಿಸುವುದು ಮನುಷ್ಯನ ಬುದ್ಧಿಪರಿಮಿತಿಗಳಿಗಾಚೆಗಿರುವ ಸಂಗತಿಯಾಗಿದೆ. ಯಾಕೆಂದರೆ ನಮ್ಮ ಜ್ಞಾನವು ಸಹಜ, ಸುವ್ಯಕ್ತ ಘಟನೆಗಳನ್ನು ಮಾತ್ರ ಅರಿಯುವ ನಿಯಮಿತ ಜ್ಞಾನವಾಗಿದೆ. ಯಾವುದೇ ಕಾರ್ಯದ ಅಂತಿಮ ಪರಿಣಾಮವನ್ನು ಅರಿಯಬಲ್ಲವನು ಅಲ್ಲಾಹನು ಮಾತ್ರ. ಆದುದರಿಂದ ವಿಪತ್ತುಗಳೆಂದು ನಮಗೆ

ಗೋಚರಿಸುವ ಸಂಕಷ್ಟಗಳು ಮತ್ತು ವ್ಯಥೆಗಳು ನಮ್ಮನ್ನು ಒಂದು ಉಪಯುಕ್ತ ಲಾಭದೆಡೆಗೆ ಕೊಂಡೊಯ್ಯಲೂಬಹುದು. ಅಲ್ಲಾಹನು ಅವನ ಪವಿತ್ರ ಹೊತ್ತಿಗೆಯಲ್ಲಿ ಭೋಧಿಸುತ್ತಾನೇನೆಂದರೆ:

﴿ وَعَسَىٰٓ أَن تَكۡرَهُواْ شَيۡـٔٗا وَهُوَ خَيۡرٞ لَّكُمۡۖ وَعَسَىٰٓ أَن تُحِبُّواْ شَيۡـٔٗا
وَهُوَ شَرّٞ لَّكُمۡۚ وَٱللَّهُ يَعۡلَمُ وَأَنتُمۡ لَا تَعۡلَمُونَ ٢١٦ ﴾

"ನೀವು ಯಾವುದನ್ನು ಕೆಟ್ಟದೆಂದು ಬಗೆಯುತ್ತೀರೋ ವಸ್ತುತಃ ಅದು ನಿಮಗೆ ಒಳಿತಾಗಿರಲೂಬಹುದು ಮತ್ತು ನೀವು ಯಾವುದನ್ನು ಒಳಿತೆಂದು ಬಗೆಯುತ್ತೀರೋ ವಸ್ತುತಃ ಅದು ನಿಮಗೆ ಕೆಡುಕಾಗಿರಲೂ ಸಾಧ್ಯವಿದೆ. ವಾಸ್ತವ ಜ್ಞಾನವು ಅಲ್ಲಾಹನಿಗೆ ಮಾತ್ರವಿದೆ, ನೀವು ಅರಿವಿಲ್ಲದವರಾಗಿರುವಿರಿ."{ಸೂರಃ ಅಲ್–ಬಕರ: 216}

ಆದುದರಿಂದ ಮನುಷ್ಯನೊಬ್ಬನು ಅವನ ಜೀವನದ ಪ್ರತಿಯೊಂದು ವಿಷಯದಲ್ಲಿ ಅಲ್ಲಾಹನಿಂದ ನಿತ್ಯವೂ ಉತ್ತಮವಾದುದನ್ನು ಮಾತ್ರ ನಿರೀಕ್ಷಿಸುತ್ತಾ ಅಲ್ಲಾಹನ ನಿರ್ಣಯ ಮತ್ತು ತೀರ್ಪಿಗೆ ಬದ್ಧವಾಗಿ ಜೀವಿಸುವುದು ಕಡ್ಡಾಯವಾಗಿದೆ. ಅಲ್ಲಾಹನನ್ನು ಅವಲಂಬಿಸಿ ಜೀವಿಸುವ ವಿಶ್ವಾಸಿಗಳಿಗೆ ಅಲ್ಲಾಹನು ಸಾಕಾಗುವನೆಂದು ಅವನು ತನ್ನ ಗ್ರಂಥದಲ್ಲಿ ನೀಡಿದ ವಾಗ್ದಾನವನ್ನೊಮ್ಮೆ ಗಮನಿಸಿ:

﴿ وَمَن يَتَوَكَّلۡ عَلَى ٱللَّهِ فَهُوَ حَسۡبُهُۥٓۚ إِنَّ ٱللَّهَ بَٰلِغُ أَمۡرِهِۦۚ
قَدۡ جَعَلَ ٱللَّهُ لِكُلِّ شَيۡءٖ قَدۡرٗا ٣ ﴾

"....ಮತ್ತು ಯಾರು ಅಲ್ಲಾಹನ ಮೇಲೆ ಭರವಸೆಯನ್ನಿಡುತ್ತಾರೋ ಅವರಿಗೆ ಅಲ್ಲಾಹು ಪರ್ಯಾಪ್ತನಾಗಿದ್ದಾನೆ. ಅಲ್ಲಾಹನು ತನ್ನ ಕಾರ್ಯವನ್ನು ಮಾಡಿಯೇ ತೀರುತ್ತಾನೆ." {ಸೂರಃ ಅತ್ತಲಾಖ್:3}

ಪವಿತ್ರ ಕುರ್‌ಆನ್ ಪ್ರವಾದಿ ಯಅ್‌ಕೂಬ್(عليه السلام)ರವರು ಅಲ್ಲಾಹನ ಮೇಲಿಟ್ಟ ದೃಢವಿಶ್ವಾಸವನ್ನು ನಮಗೆ ಪರಿಚಯಿಸುತ್ತದೆ.

ಯಅ್ಕೂಬ್(ﷺ)ರವರ ಮಕ್ಕಳು ತುಂಬಾ ಅಂದವಾಗಿದ್ದರು. ತನ್ನ ಮಕ್ಕಳನ್ನು ಈಜಿಪ್ಟಿಗೆ ಕಳುಹಿಸಿಕೊಡುವಾಗ ಅವರು ಮಕ್ಕಳಿಗೆ ವಿಭಿನ್ನ ಪ್ರವೇಶದ್ವಾರಗಳ ಮೂಲಕ ಪಟ್ಟಣವನ್ನು ಪ್ರವೇಶಿಸುವಂತೆ ನಿರ್ದೇಶಿಸಿದರು. ಯಾಕೆಂದರೆ ಅವರು ಜನರ ಕೆಟ್ಟ ದೃಷ್ಟಿಯ ಕುರಿತು ಭಯಪಟ್ಟಿದ್ದರು:

"ಮತ್ತು ಅವರು (ಯಅ್ಕೂಬ್ ಅ.ಸ) ಹೇಳಿದರು, 'ನನ್ನ ಪ್ರಿಯ ಮಕ್ಕಳೇ! ನೀವು ಒಂದೇ ದ್ವಾರದಿಂದ ಒಳಪ್ರವೇಶ ಮಾಡಬೇಡಿರಿ, ಆದರೆ ಭಿನ್ನ ಭಿನ್ನ ದ್ವಾರಗಳಿಂದ ಒಳಪ್ರವೇಶಿಸಿರಿ..." (ನಂತರ) ಅವರು ಹೇಳಿದರು, 'ಅಲ್ಲಾಹನ ಕಡೆಯಿಂದ ಆಗಮಿಸುವ ಯಾವೊಂದು ಸಂಗತಿಯನ್ನೂ ನಿಮ್ಮಿಂದ ದೂರೀಕರಿಸಲು ನನ್ನಿಂದಾಗದು, ಪರಮಾಜ್ಞೆಯು ಅಲ್ಲಾಹನದೇ ನಡೆಯುತ್ತದೆ. ನನ್ನ ಸಂಪೂರ್ಣ ಭರವಸೆ ಅವನ ಮೇಲಿದೆ. ಮತ್ತು ಪ್ರತಿಯೊಬ್ಬ ಭರವಸೆಯಿಡುವವನೂ ಅವನ ಮೇಲೆಯೇ ಭರವಸೆಯನ್ನಿಡಲಿ. {ಸೂರಃ ಯೂಸುಫ್:**67**}

ಇದರರ್ಥ, ಆದಾಗ್ಯೂ ನನ್ನ ಮುಂಜಾಗ್ರತಾ ಕ್ರಮ ಅಲ್ಲಾಹನ ನಿರ್ಣಯ ಹಾಗೂ ಅವನಿಂದ ನಿಶ್ಚಯಿಸಲ್ಪಟ್ಟ ವಿಧಿಯನ್ನು ತಡೆಯದು. ಅಲ್ಲಾಹನು ನನಗಾಗಿ ಯಾವುದನ್ನೆಲ್ಲಾ ಆರಿಸಿದ್ದಾನೋ (ವಿಧಿಸಿದ್ದಾನೋ) ಅವು ಅತ್ಯುತ್ತಮವಾಗಿದೆ ಎಂದು ನಾನು ಅಲ್ಲಾಹನಲ್ಲಿ ಭರವಸೆವನ್ನರ್ಪಿಸುತ್ತೇನೆ ಎಂದಾಗಿದೆ.

ವಿಶ್ವಾಸಿಯೊಬ್ಬ ಸದಾ ಅಲ್ಲಾಹನ ತೀರ್ಪು ಹಾಗೂ ವಿಧಿಯ ಬಗ್ಗೆ ಸಂತುಷ್ಟನಾಗಿರಬೇಕೆಂದು ಪ್ರವಾದಿ(ﷺ)ಯವರು ವಿವರಿಸಿದ್ದಾರೆ. ಜೀವನದಲ್ಲಿ ತೃಪ್ತಿ ಹಾಗೂ ನಿಶ್ಚಿಂತತೆ ಲಭಿಸಿದವನು ಅದಕ್ಕಾಗಿ ಅಲ್ಲಾಹನೊಂದಿಗೆ ಕೃತಜ್ಞನಾಗಿರಬೇಕು. ಅದೇರೀತಿ ವಿಪತ್ತುಗಳು ಭಾಧಿಸಿದರೆ ತಾಳ್ಮೆಯನ್ನು ಅಭ್ಯಸಿಸಿಕೊಳ್ಳಬೇಕು. ಪ್ರವಾದಿ(ﷺ.) ಹೇಳಿದರು, "ಅವನಿಗೆ (ಸತ್ಯವಿಶ್ವಾಸಿಗೆ) ಅನುಕೂಲತೆಯೇನಾದರೂ ಒದಗಿದರೆ ಅವನು (ಅಲ್ಲಾಹನಿಗೆ) ಕೃತಜ್ಞತೆ ತೋರಿಸುತ್ತಾನೆ, ಇದು ಅವನಿಗೆ ಒಳಿತಾಗಿರುತ್ತದೆ. ಇನ್ನು ಅವನಿಗೆ ಸಂಕಷ್ಟಗಳೇನಾದರೂ ಭಾಧಿಸಿದರೆ ಅವನು ಸಹನೆ ವಹಿಸುತ್ತಾನೆ, ಇದು ಅವನಿಗೆ ಒಳಿತಾಗಿರುತ್ತದೆ." {ಸಹೀಹ್ ಮುಸ್ಲಿಮ್}

ವ್ಯಥೆಗಳನ್ನು ಅಭಿಮುಖೀಕರಿಸಲಾಗದೆ ಉಚ್ಛಸ್ವರದಲ್ಲಿ ಪ್ರಲಾಪಿಸುವುದು, ವಸ್ತ್ರಗಳನ್ನು ಹರಿದುಕೊಳ್ಳುವುದು, ಸ್ವಯಂ ಕೆನ್ನೆಗೆ ಹೊಡೆದುಕೊಳ್ಳುವುದು ಮುಂತಾದ ತಾಳ್ಮೆಗೆಟ್ಟ ಉದ್ವೇಗಕಾರಿ ವರ್ತನೆ, ಕೋಪಾತಾಪಗಳ ಪ್ರದರ್ಶನ ಮತ್ತು ಅಲ್ಲಾಹನ ತೀರ್ಪಿನಲ್ಲಿ ಅಸಂತೃಪ್ತಿ ಪ್ರಕಟಿಸುವ ರೀತಿಯಲ್ಲಿರುವ ಮಾತು ಹಾಗೂ ಕ್ರಿಯೆ ಇವುಗಳೆಲ್ಲವೂ ವಿರೋಧಿಸಲ್ಪಟ್ಟಿವೆ. ಉಪೇಕ್ಷಿಸಲು ಸಾಧ್ಯವಾಗಿದ್ದವನಾಗಿದ್ದು ಕೂಡ ವಿರೋಧಿಸಲ್ಪಟ್ಟ ಕಾರ್ಯಗಳಲ್ಲಿ ಭಾಗಿಯಾದವನು ಅಂತ್ಯದಿನದಂದು ಅಲ್ಲಾಹನ ಮುಂದೆ ಉತ್ತರದಾಯಿಯಾಗಿರುತ್ತಾನೆ.

ದುಃಖ ಮತ್ತು ಕಷ್ಟಗಳೆದುರಾಗುವಾಗ ಗೋಳಾಡುವವನು, ದುಃಖಸೂಚಕವಾಗಿ ತಲೆಬೋಳಿಸಿಕೊಳ್ಳುವವನು ಮತ್ತು ವಿಲಾಪರೋದನದಿಂದ ಉಟ್ಟವಸ್ತ್ರಗಳನ್ನು ಹರಿದುಕೊಳ್ಳುವವನಿಂದ ಪ್ರವಾದಿ(ﷺ) ಸ್ವಯಂ ತನ್ನನ್ನು ಬೇರ್ಪಡಿಸಿಕೊಂಡಿದ್ದಾರೆಂದು ಇಮಾಮ್ ಬುಖಾರಿ (ರಹಿಮಹುಲ್ಲಾಹ್) ತನ್ನ ಸಹೀಹ್‌ನಲ್ಲಿ ಅಬೂ ಮೂಸಾ ಅಲ್ ಅನ್ಸಾರಿ(رضي الله عنه)ಯವರಿಂದ ವರದಿ ಮಾಡಿರುತ್ತಾರೆ. ಈ ರೀತಿಯ ಕ್ರಿಯೆಗಳು ವಿರೋಧಿಸಲ್ಪಟ್ಟಿದೆಯೆಂದು ವಿದ್ವಾಂಸರು ಒಮ್ಮತಾಭಿಪ್ರಾಯವನ್ನು ಹೊಂದಿದ್ದಾರೆ.

ಏನಿದ್ದರೂ ನಿಯಂತ್ರಣಾತೀತವಾಗಿ ದಾಸನೊಬ್ಬನಿಂದ ಸಂಭವಿಸುವ ಕ್ರಿಯೆಗಳಿಗೆ ಅಲ್ಲಾಹನು ಅವನನ್ನು ಶಿಕ್ಷಿಸಲಾರನು. ಉದಾಹರಣೆಗೆ, ಅನಿಯಂತ್ರಿತವಾಗಿ ಹೊರಡುವ ಕಣ್ಣೀರು ಮತ್ತು ಹೃದಯವನ್ನು ನೋಯಿಸುವ ದುಃಖಗಳು.

ಒಲವಿನಿಂದ ಹೃದಯದಲ್ಲಿಟ್ಟು ಪೋಷಿಸಿದವುಗಳೇನಾದರೂ ನಷ್ಟಪಟ್ಟುಹೋದರೆ ಅಥವಾ ಅಚ್ಚುಮೆಚ್ಚಿನ ಯಾರನ್ನಾದರೂ ಅಗಲಿದರೆ ಸಹಜವಾಗಿಯೇ ನಾವೆಲ್ಲರೂ ಶೋಕಿತರಾಗುತ್ತೇವೆ. ಈ ದುಃಖದ ಕಾರಣದಿಂದ ನಮ್ಮ ಕಣ್ಣುಗಳಿಂದ ಹೊರಡುವ ಅಶ್ರುಧಾರೆಗಳಿಗಾಗಿ ಅಲ್ಲಾಹನು ನಮ್ಮನ್ನು ಶಿಕ್ಷಿಸಲಾರನು. ಆದರೆ ಈ ಸಮಯದಲ್ಲಿ ಅಲ್ಲಾಹನ ತೀರ್ಪಿನಲ್ಲಿ ಅಸಮಾಧಾನ ಮತ್ತು ಸಿಟ್ಟು ಹೊಂದುವ ರೀತಿಯಲ್ಲಿ ನಮ್ಮ ಮನಃಪಟಲದಲ್ಲಿ ಹಾದುಹೋಗಲು ಸಾಧ್ಯವಿರುವ ಕೆಟ್ಟಯೋಚನೆಗಳನ್ನು ನಿಗ್ರಹಿಸಿ ನಾಲಗೆಯನ್ನು ಅಲ್ಲಾಹನ ತೀರ್ಪಿಗೆ ವಿರುದ್ಧವಾಗಿ ಚಲಿಸದಂತೆ ತಡೆಹಿಡಿಯುವುದು ದಾಸನೊಬ್ಬನಿಗೆ ಅಗತ್ಯವಾಗಿದೆ.

ಒಂದು ದಿನ ಪ್ರವಾದಿ(ﷺ) ತನ್ನಕೆಲವು ಅನುಚರರೊಂದಿಗೆ ಸ್ವಹಾಬಿವರ್ಯರಾದ ಸಅದ್ ಬಿನ್ ಉಬಾದ(ؓ)ರವರನ್ನು ಕಾಣಲು ತೆರಳಿದರು. ಸಅದ್ ಬಿನ್ ಉಬಾದರವರು(ؓ) ರೋಗಪೀಡಿತರಾಗಿದ್ದರು. ರೋಗಶಯ್ಯೆಯಲ್ಲಿದ್ದ ಸಅದ್‌ರವರನ್ನು ಕಂಡಾಗ ಪ್ರವಾದಿ(ﷺ) ಅತ್ತುಬಿಟ್ಟರು. ಪ್ರವಾದಿಯವರ ಕಣ್ಣೀರನ್ನು ಕಂಡು ಸಂಗವಿದ್ದ ಅನುಚರರಿಂದಲೂ(ؓ) ಅಳುವನ್ನು ತಡೆದುಕೊಳ್ಳಲಾಗಲಿಲ್ಲ. ಆಗ ಪ್ರವಾದಿ(ﷺ) ಹೇಳಿದರು, "ನೀವು ಕೇಳುತ್ತಿರುವಿರಾ! ನಿಸ್ಸಂದೇಹವಾಗಿಯೂ ಅಲ್ಲಾಹನು ಕಣ್ಣೀರು ಹಾಗೂ ಹೃದಯದ ಬೇಗುದಿಯ ಕಾರಣಕ್ಕಾಗಿ ಶಿಕ್ಷಿಸನು, ಆದರೆ ಇದರ ಕಾರಣಕ್ಕಾಗಿ (ತನ್ನ ನಾಲಗೆಯತ್ತ ಬೊಟ್ಟು ಮಾಡುತ್ತಾ) ಶಿಕ್ಷಿಸುವನು. ಇಲ್ಲವೇ ಕರುಣೆ ತೋರುವನು." {ಸಹೀಹ್ ಅಲ್–ಬುಖಾರಿ}

ಪ್ರವಾದಿ(ﷺ)ಮರಣಾಸನ್ನನಾಗಿದ್ದ ತನ್ನ ಪ್ರಿಯಪುತ್ರ ಇಬ್ರಾಹೀಮ್‌ರ ಬಳಿಗೆ ಬಂದಾಗ ಅವರ ಕಣ್ಣುಗಳಿಂದ ಕಣ್ಣೀರುಗಳರಿಯುತ್ತಿತ್ತು. ಇದನ್ನು ಕಂಡು ಪ್ರಮುಖ ಸ್ವಹಾಬಿವರ್ಯರಾದ ಅಬ್ದುಲ್ ರಹ್ಮಾನ್ ಬಿನ್ ಔಫ್(ؓ) ರವರು ಪ್ರವಾದಿಯವರೊಂದಿಗೆ(ﷺ) ಕೇಳಿದರು, "ಅಲ್ಲಾಹನ ಸಂದೇಶವಾಹಕರೇ! ನೀವೂ ಸಹ....? ಪ್ರವಾದಿವರ್ಯರು(ﷺ) ಉತ್ತರಿಸಿದರು, 'ಓ ಔಫನ ಪುತ್ರನೇ, ನಿಜವಾಗಿಯೂ ಇದು ಕಾರುಣ್ಯವಾಗಿದೆ'. ಪ್ರವಾದಿ(ﷺ) ಬಳಿಕ ಪುನಃ ಒಂದಿಷ್ಟು ಅತ್ತ ನಂತರ ಹೇಳಿದರು, 'ಕಣ್ಣುಗಳು ಅಳುತ್ತಿವೆ, ಹೃದಯವು ದುಃಖಿಸುತ್ತಿದೆ, ಆದರೆ ನಮ್ಮ ಪಾಲಕಪ್ರಭುವು ಸಂತೃಪ್ತಿಪಡುವುದರ ಹೊರತು ಬೇರೆನನ್ನೂ ನಾನು ಹೇಳಲಾರೆ. ಓ ಇಬ್ರಾಹೀಮ್! ನಿನ್ನ ಅಗಲುವಿಕೆಯಿಂದ ನಿಜವಾಗಿಯೂ ನಾವು ದುಃಖಿತರಾಗಿದ್ದೇವೆ." {ಸಹೀಹ್ ಬುಖಾರಿ}

# ನಿನ್ನೊಂದಿಗೆ ಸಂಭವಿಸಿರುವುದನ್ನು ತಪ್ಪಿಸಲು ಸಾಧ್ಯವಿರಲಿಲ್ಲ.

ಲೌಹುಲ್-ಮಹ್‌ಫೂದ್ (ಸುರಕ್ಷಿತ ಕೋಶ) ಎಂಬಲ್ಲಿ ಅಂಕಿತಗೊಳಿಸಲ್ಪಡದ ಯಾವೊಂದು ಘಟನೆಯೂ ಈ ಭೂಮಿಯ ಮೇಲೆ ಘಟಿಸದು. ಉನ್ನತನೂ ಪ್ರತಾಪಶಾಲಿಯೂ ಆದ ಸೃಷ್ಟಿಕರ್ತನಾದ ಅಲ್ಲಾಹನು ಅಲ್ಲಿ ಸೃಷ್ಟಿಗಳಿಗೆ ಸಂಭಂದಿಸಿದಂತಹ ಸರ್ವವಿಷಯಗಳನ್ನೂ ದಾಖಲಿಸಿಟ್ಟಿದ್ದಾನೆ. ಜೀವನಾಧಾರ, ಆಹಾರಖಾದ್ಯಗಳು, ಆಯುಸ್ಸು, ಕರ್ಮಗಳು ಇತ್ಯಾದಿ... ಅಲ್ಲಾಹನ ಸಂದೇಶವಾಹಕರಾದ ಮುಹಮ್ಮದ್ (ﷺ) ಹೇಳಿದರು, "ಅಲ್ಲಾಹನು ಸೃಷ್ಟಿಯ ಯೋಜಿತ ಲಯವನ್ನು (ಪ್ರಮಾಣಬದ್ಧವಾಗಿ) ಭೂಮ್ಯಾಕಾಶಗಳನ್ನು ಸೃಷ್ಟಿಸುವುದಕ್ಕಿಂತಲೂ ಐವತ್ತು ಸಾವಿರ ವರ್ಷಗಳ ಮುಂಚೆಯೇ ಬರೆದಿಟ್ಟಿದ್ದಾನೆ." {ಸಹೀಹ್ ಮುಸ್ಲಿಮ್}

ದಾಸನೊಬ್ಬನ ಜೀವನದಲ್ಲಿ ಸಂಭವಿಸುವ ಪ್ರತಿಯೊಂದು ದುರ್ಘಟನೆಗಳೂ ಅಲ್ಲಾಹನಿಂದ ಮುಂಚೆಯೇ ನಿರ್ಣಯಿಸಲ್ಪಟ್ಟದ್ದಾಗಿದೆ. ಈ ಬಗ್ಗೆ ಕುರ್‌ಆನ್ ಪ್ರಖ್ಯಾಪಿಸುವುದನ್ನು ನೋಡಿ.

﴿ مَآ أَصَابَ مِن مُّصِيبَةٍ فِي ٱلۡأَرۡضِ وَلَا فِيٓ أَنفُسِكُمۡ
إِلَّا فِي كِتَٰبٍ مِّن قَبۡلِ أَن نَّبۡرَأَهَآۚ إِنَّ ذَٰلِكَ عَلَى ٱللَّهِ يَسِيرٌ ٢٢
لِّكَيۡلَا تَأۡسَوۡاْ عَلَىٰ مَا فَاتَكُمۡ وَلَا تَفۡرَحُواْ بِمَآ ءَاتَىٰكُمۡۗ
وَٱللَّهُ لَا يُحِبُّ كُلَّ مُخۡتَالٍ فَخُورٍ ٢٣ ﴾

**"ಭೂಮಿಯಲ್ಲಾಗಲಿ, ಸ್ವತಹ ನಿಮಗಾಗಲಿ ಯಾವುದೇ ಸಂಕಷ್ಟ ಬರಲಿ, ನಾವು ಅದನ್ನು ವಿಧಿಸುವ ಮುಂಚೆ ಒಂದು ಗ್ರಂಥದಲ್ಲಿ (ಲೌಹುಲ್-ಮಹ್‌ಫೂದ್‌ನಲ್ಲಿ) ದಾಖಲಿಸಿಟ್ಟರದೇ ಇಲ್ಲ. ಇದು (ಈ ಕಾರ್ಯವು ) ಅಲ್ಲಾಹನಿಗೆ ಅತ್ಯಂತ ಸರಳವಾಗಿದೆ. ಇದೇಕ್ಕೆಂದರೆ ನಿಮಗೆ ನಷ್ಟವಾಗಿರುವ ಯಾವುದೇ ವಸ್ತುವಿನ ಕುರಿತು ನೀವು ಸಂಕಟಪಡಬಾರದೆಂದೂ, ನಿಮಗೆ ಲಭಿಸಿದವುಗಳ ಮೇಲೆ ನೀವು ಹಿಗ್ಗಬಾರದೆಂಬುವುದಕ್ಕಾಗಿದೆ. ಮತ್ತು ಅಲ್ಲಾಹು ಯಾವುದೇ ದುರಾಭಿಮಾನಿಯಾದ ಆತ್ಮಪ್ರಶಂಸಕನ್ನು ಮೆಚ್ಚಲಾರನು."{ಸೂರಃ ಅಲ್-ಹದೀದ್:** 22, 23}

**ಮುಂಚೆಯೇ ನಿರ್ಣಯಿಸಲ್ಪಟ್ಟ ವಿಧಿಯ ಹಿಂದಿರುವ ತನ್ನ ದಿವ್ಯಜ್ಞಾನವನ್ನು ವಿವರಿಸುತ್ತಾ ಅಲ್ಲಾಹನು (ಅಲ್-ಹದೀದ್ ಅಧ್ಯಾಯದ ಮುಂದಿನ ಸೂಕ್ತಗಳಲ್ಲಿ) ದಾಸನೊಬ್ಬನು ವಿಪತ್ತುಗಳು ಬಾಧಿಸಿದಾಗ ಎದೆಗುಂದದಂತೆಯೂ, ಸಫಲತೆಯನ್ನು ಪಡೆದರೆ ದರ್ಪ ಹಾಗೂ ಉದ್ಧಟತನವನ್ನು ಪ್ರದರ್ಶಿಸಕೂಡದೆಂದೂ ಭೋಧಿಸುತ್ತಾನೆ. ಏಕೆಂದರೆ ನಮ್ಮನ್ನು ಭಾಧಿಸುವ ಪ್ರತಿಯೊಂದು ವಿಪತ್ತುಗಳೂ ಅಲ್ಲಾಹನಿಂದ ಪೂರ್ವನಿರ್ಧಾರಿತಗೊಂಡಿರುವಂತಹದು. ಮತ್ತು ಎಲ್ಲಾ ಅನುಗ್ರಹಗಳೂ ಅಲ್ಲಾಹನ ಅಪಾರ ಕರುಣೆ ಹಾಗೂ ಕೃಪೆಯಿಂದಾಗಿದೆ. ಆದುದರಿಂದ ದಾಸನೊಬ್ಬನಿಗೆ ಏನೆಲ್ಲಾ ತಲುಪಿದೆಯೋ ಅದರಿಂದ ತಪ್ಪಿಸಿಕೊಳ್ಳಲು ಅವನಿಂದ ಸಾಧ್ಯವಿರಲಿಲ್ಲ. ಯಾವುದೆಲ್ಲ ಅವನಿಂದ ತಪ್ಪಿಹೋಗಿದೆಯೋ ಅದನ್ನು ಪಡೆಯಲೂ ಅವನಿಂದ ಸಾಧ್ಯವಿರಲಿಲ್ಲ. ಈ ನಂಬಿಕೆಯು ನಮ್ಮ ಈಮಾನ್(ಮತವಿಶ್ವಾಸ)ನ ಸಾರಭೂತವಾದ ಭಾಗವಾಗಿದೆ. ಅಲ್ಲಾಹನ**

ಸಂದೇಶವಾಹಕ(ﷺ)ರೊಂದಿಗೆ 'ಈಮಾನ್ ಎಂದರೇನು?' ಎಂದು ಪ್ರಶ್ನಿಸಲ್ಪಟ್ಟಾಗ, ಅವರು(ﷺ) ಪ್ರತ್ಯುತ್ತರಿಸಿದರು, "ಈಮಾನ್ ಅಂದರೆ ಅಲ್ಲಾಹನಲ್ಲೂ, ಅವನ ದೂತರಲ್ಲೂ (ಮಲಾಯಿಕ್‌ಗಳು), ಅವನ ಸಂದೇಶವಾಹಕರಲ್ಲೂ, ಅವನ ಗ್ರಂಥಗಳಲ್ಲೂ, ಅಂತ್ಯದಿನದಲ್ಲೂ ವಿಶ್ವಾಸವಿಡುವುದು ಮತ್ತು ಒಳಿತು, ಕೆಡುಕುಗಳು ಅಲ್ಲಾಹನ ಕಡೆಯಿಂದ ಪೂರ್ವವಿಧಿತಗೊಂಡದ್ದಾಗಿದೆ ಎಂದು ವಿಶ್ವಾಸವಿಡುವುದಾಗಿದೆ." {ಮುತ್ತಫಕುನ್ ಅಲೈಹಿ}

ದಾಸನೊಬ್ಬನು 'ನಾನು ಈ ರೀತಿ ಮಾಡುತ್ತಿದ್ದರೆ ಫಲಿತಾಂಶ ಭಿನ್ನವಾಗಿರುತ್ತಿತ್ತು....., ಅಥವಾ 'ಛೇ...ನಾನು ಆ ರೀತಿ ಮಾಡುತ್ತಿದ್ದರೆ ಈ ವಿಪತ್ತಿನಿಂದ ಪಾರಾಗುತ್ತಿದ್ದೆ......, ಮುಂತಾದ ಊಹಾಧಾರಿತ ವಿಚಾರಗಳು ಹಾಗೂ ಮಾತುಗಳನ್ನಾಡುವ ಗೊಡವೆಗೆ ಹೋಗಬಾರದು. ಅಲ್ಲಾಹನ ಪ್ರವಾದಿವರ್ಯರು(ﷺ) ಹೇಳುವುದನ್ನು ನೋಡಿ, "ನಿನಗೇನಾದರೂ ಸಂಗತಿಯು ಭಾಧಿಸಿದರೆ (ನಿನ್ನನ್ನು ತೊಂದರೆಗೊಳಪಡಿಸುವ ರೀತಿಯಲ್ಲಿ) 'ನಾನು ಹಾಗೆ ಮಾಡುತ್ತಿದ್ದರೆ....ಹೀಗೆ ಸಂಭವಿಸುತ್ತಿರಲಿಲ್ಲ' ಎಂದು ನೀನು ಹೇಳಬೇಡ, ಬದಲಿಗೆ ನೀನು ಹೇಳು, 'ಅಲ್ಲಾಹನ ವಿಧಿ, ಅವನಿಚ್ಛಿಸಿದ್ದನ್ನು ಮಾಡಿಬಿಟ್ಟಿರುವನು'. ಏಕೆಂದರೆ 'ಹೀಗೆ ಮಾಡಿರುತ್ತಿದ್ದರೆ....' ಎಂಬ (ಊಹಾಧಾರಿತ) ಮಾತು ಶೈತಾನನ ಕಾರ್ಯಗಳಿಗೆ ಬಾಗಿಲನ್ನು ತೆರೆಯುತ್ತದೆ." {ಸ್ವಹೀಹ್ ಮುಸ್ಲಿಮ್ 6441}

ಅನಗತ್ಯ ಊಹಾಪೋಹಗಳ ಗೊಡವೆಗೆ ಹೋಗದೆ ಸಹನೆ ವಹಿಸುವ ವಿಶ್ವಾಸಿಗಳ ಹೃದಯಕ್ಕೆ ಮಾರ್ಗದರ್ಶನವೀಯುವ ಮತ್ತು ಅವರ ಮನಸ್ಸಿಗೆ ಶಾಂತಿ, ಸ್ಥೈರ್ಯವನ್ನು ನೀಡುವ ವಾಗ್ದಾನವನ್ನು ಸರ್ವಶಕ್ತನಾದ ಅಲ್ಲಾಹು ನೀಡಿದ್ದಾನೆ. ಅಲ್ಲಾಹನು ಹೇಳುತ್ತಾನೆ:

﴿ مَآ أَصَابَ مِن مُّصِيبَةٍ إِلَّا بِإِذۡنِ ٱللَّهِ
وَمَن يُؤۡمِنۢ بِٱللَّهِ يَهۡدِ قَلۡبَهُۥۚ وَٱللَّهُ بِكُلِّ شَيۡءٍ عَلِيمٞ ١١ ﴾

“ಯಾವುದೇ ಪ್ರಯಾಸಕರ ಸಂಗತಿಯು ಅಲ್ಲಾಹನ ಅಪ್ಪಣೆಯ ವಿನಹಃ ಸಂಭವಿಸಲಾರದು, ಯಾರು ಅಲ್ಲಾಹನಲ್ಲಿ ವಿಶ್ವಾಸವಿರಿಸುತ್ತಾನೋ ಅವನ ಹೃದಯಕ್ಕೆ ಅಲ್ಲಾಹನು ಸನ್ಮಾರ್ಗವನ್ನು ನೀಡುತ್ತಾನೆ. ಅಲ್ಲಾಹು ಸಕಲವನ್ನೂ ಅರಿಯುವವನಾಗಿದ್ದಾನೆ” {ಸೂರ ತಗಾಬುನ್: 11}

ಇಬ್ನು ಅಬ್ಬಾಸ್(ﷺ) ಹೇಳುತ್ತಾರೆ, “ಅಲ್ಲಾಹನು ದಾಸನೊಬ್ಬನ ಹೃದಯಕ್ಕೆ ಮಾರ್ಗದರ್ಶನವನ್ನ ನೀಡುತ್ತಾನೆ ಎನ್ನುವುದರ ಅರ್ಥ ಅಲ್ಲಾಹು ಅವನ (ದಾಸನ) ಹೃದಯಕ್ಕೆ ಖಚಿತತೆಯನ್ನು ನೀಡುತ್ತಾನೆ ಎಂದಾಗಿದೆ. ಈ ಮೂಲಕ ದಾಸನೊಬ್ಬನು ತನ್ನೊಂದಿಗೆ ಸಂಭವಿಸಿದ್ದೇನೋ ಅದರಿಂದ ತಪ್ಪಿಸಿಕೊಳ್ಳಲು ತನಗೆ ಸಾಧ್ಯವಿರಲಿಲ್ಲ ಮತ್ತು ತನ್ನಿಂದ ತಪ್ಪಿಹೋದುದನ್ನು ಪಡೆದಿರಲೂ ತನಗೆ ಸಾಧ್ಯವಿರಲಿಲ್ಲ ಎನ್ನುವುದನ್ನು ಚೆನ್ನಾಗಿ ಅರಿತುಕೊಳ್ಳುತ್ತಾನೆ.” {ತಬರಿ: 23:421}

ಇಮಾಮ್ ಇಬ್ನುಕಸೀರ್(ರಹಿಮಹುಲ್ಲಾಹ್) ತನ್ನ ತಫ್ಸೀರ್‌ನಲ್ಲಿ ಬರೆಯುತ್ತಾರೆ, “ವಿಪತ್ತೊಂದು ಬಾಧಿಸಿದ ಸಂದರ್ಭದಲ್ಲಿ ದಾಸನೊಬ್ಬನು ಅಲ್ಲಾಹನ ತೀರ್ಮಾನ ಹಾಗೂ ವಿಧಿಗೆ ಅನುಗುಣವಾಗಿ ಮಾತ್ರವೇ ತನಗಿದು ಸಂಭವಿಸಿದೆ ಎಂದು ತಿಳಿದು, ಅಲ್ಲಾಹನ ತೀರ್ಮಾನಕ್ಕೆ ಬದ್ಧವಾಗಿ ಸಹನೆಯನ್ನು ಕೈಗೊಂಡು, ಅಲ್ಲಾಹನ ಕಡೆಯಿಂದ ಪ್ರತಿಫಲವನ್ನು ನಿರೀಕ್ಷಿಸಿದರೆ ಅಲ್ಲಾಹನು ಆ ದಾಸನ ಜೀವನದಲ್ಲಿ ಸಂಭವಿಸಿದ ನಷ್ಟವನ್ನು ಸರಿದೂಗಿಸುತ್ತಾನೆ ಮತ್ತು ಆತನ ಹೃದಯಕ್ಕೆ ಮಾರ್ಗದರ್ಶನ ಹಾಗೂ ವಿಶ್ವಾಸದಲ್ಲಿ ಖಚಿತತೆಯನ್ನು ದಯೆಪಾಲಿಸುತ್ತಾನೆ. ಆತನಿಗಾದ ಹಾನಿಯ ಪ್ರಮಾಣಕ್ಕನುಗುಣವಾಗಿ ಅಥವಾ ಅದಕ್ಕಿಂತಲೂ ಹೆಚ್ಚಾದ ಒಳಿತನ್ನು ಆತನಿಗೆ ನೀಡುತ್ತಾನೆ.”

# ದುಃಖಗಳು ಅನುಗ್ರಹದ

## ಇನ್ನೊಂದು ರೂಪವಾಗಿದೆ

ಕೆಲವು ತರಹದ ಕಷ್ಟದೆಸೆಗಳು ಹಾಗೂ ವಿಪತ್ತುಗಳು ವಿಶ್ವಾಸಿಯೊಬ್ಬನಿಗೆ ನಾನಾತರಹದ ಒಳಿತನ್ನು ತರುತ್ತದೆ. ಅವುಗಳನ್ನು ಅಂಗೀಕರಿಸುವ ಮೂಲಕ ತಾಳ್ಮೆ ಮತ್ತು ಸಹನೆಶಕ್ತಿಯನ್ನು ಪಡೆಯುವ ನಿಟ್ಟಿನಲ್ಲಿ ವಿಶ್ವಾಸಿಯೊಬ್ಬನ ಪಥವು ಸುಲಭಗೊಳ್ಳುತ್ತದೆ.

◆ ಕಷ್ಟದೆಸೆಗಳು ವಿಶ್ವಾಸಿಯೊಬ್ಬನಿಗೆ ಸಹಿಷ್ಣುತೆಯನ್ನು ಕಲಿಸುತ್ತದೆ. ಹಾಗೂ ಈ ಕಾರಣದಿಂದಾಗಿ ಅಲ್ಲಾಹನು ತನ್ನ ದಾಸನಿಗೆ ಹೇರಳವಾದ ಪ್ರತಿಫಲವನ್ನು ನೀಡುತ್ತಾನೆ.

◆ ಕಷ್ಟಾನುಭವಗಳು ಪಾಪಪೂರಿತ ವಿಶ್ವಾಸಿಯೊಬ್ಬನಿಗೆ ಜೀವನದ ಅತಿದೊಡ್ಡ ನೋವಿನ ಕುರಿತು ಜ್ಞಾಪಿಸುತ್ತದೆ. “ಮರಣ” ಅವನನ್ನು ಯಾವ ಕ್ಷಣವೂ ಅನ್ವೇಷಿಸಿ ಬರಬಹುದು. ಅದು ಅವನಿಗೆ ಅಲ್ಲಾಹನೊಂದಿಗೆ ತೋರಿದ ಧಿಕ್ಕಾರದ ಪ್ರತಿಫಲವೆಂಬಂತೆ ಪ್ರಾಪ್ತಿಯಾಗಲಿರುವ ದುಸ್ಸಹವಾದ ಶಿಕ್ಷೆಯನ್ನು ನೆನಪಿಸಬಹುದು.
ದೇವಾಜ್ಞೆಯನ್ನು ಉಲ್ಲಂಘಿಸುತ್ತಾ ಅತಿಕ್ರಮವನ್ನು ತೋರುವವರು ಜನರ ಬುದ್ಧಿವಾದದತ್ತ ಗಮನಕೊಡುವುದು ತುಂಬಾ ವಿರಳ. ಆದರೆ ವಿಪತ್ತುಗಳು ಬಾಧಿಸಿದಾಗ ಅವರಿಗೆ ಅಲ್ಲಾಹು ಮತ್ತು ಅವನ ಕಠಿಣ ಶಿಕ್ಷೆಯ ಕುರಿತು ಜ್ಞಾಪಕ ಮೂಡುತ್ತದೆ.

ಅಲ್ಲಾಹು ಹೇಳುತ್ತಾನೆ;

"ನಿಸ್ಸಂಶಯವಾಗಿಯೂ, ಸಮೀಪದಲ್ಲೇ ಆ ಮಹಾಶಿಕ್ಷೆಯೆರಗುವ ಮುಂಚಾಗಿ ನಾವು ಅವರಿಗೆ ಕಿರಿಯ ಶಿಕ್ಷೆಗಳಿಂದ ಸವಿಯುಣಿಸುವೆವು. ಅವರು (ನೇರ ಮಾರ್ಗದತ್ತ) ಮರಳಿಕೊಳ್ಳಲೆಂದು." {ಸೂರ ಅಸ್ಸಜ್ದ: 21}

ಆದ್ದರಿಂದ, ವಿಪತ್ತುಗಳು ತಕ್ಕ ಸಮಯಕ್ಕೆ ಮನುಷ್ಯನ ಪಾಪ ಹಾಗೂ ಅದರ ಘೋರ ಪರಿಣಾಮಗಳ ಮೇಲೆ ಪ್ರತಿಫಲನವೀಯುತ್ತದೆ. ಇದರ ಪರಿಣಾಮವಾಗಿ ಮನುಷ್ಯನು ತನ್ನ ತಪ್ಪುಗಳನ್ನು ಅಂಗೀಕರಿಸಿ (ತಿದ್ದಿಕೊಂಡು) ಪಶ್ಚಾತ್ತಾಪದೊಂದಿಗೆ ಅಲ್ಲಾಹನತ್ತ ತಿರುಗುವ ಸಾಧ್ಯತೆಯಿದೆ. ಈ ಮೂಲಕ ಐಹಿಕ ಜೀವನದಲ್ಲಿ ಎದುರಾಗುವ ಸಂಕಷ್ಟಗಳು ಪಾಪಿಯೊಬ್ಬನ ಜೀವನವಿಧಾನವನ್ನು ಬಲಾಯಿಸಬಲ್ಲ ಅನುಗ್ರಹವಾಗಿ ಉಪಕರಿಸಬಲ್ಲುದು.

◆ಇಹಲೋಕದ ಸಂಕಷ್ಟಗಳು, ವಿಶ್ವಾಸಿಯೊಬ್ಬ ತನ್ನ ಪಾಪಗಳಿಂದಾಗಿ ಪರಲೋಕದಲ್ಲಿ ಪಡೆಯಲಿರುವ ಪ್ರಯಾಸಗಳನ್ನು ಕಡಿತಗೊಳಿಸುತ್ತದೆ. ಮತ್ತು ಪರಲೋಕದ ದುಸ್ಸಹ, ಸಹಿಸಲಸಾಧ್ಯವಾದ ಶಿಕ್ಷೆಗಳಿಂದ ಅವನನ್ನು ಪಾರು ಮಾಡುತ್ತದೆ. ಅಲ್ಲಾಹನ ಸಂದೇಶವಾಹಕರು (ﷺ) ಹೇಳಿದರು, "ವಿಶ್ವಾಸವಿಟ್ಟ ಪುರುಷರು ಹಾಗೂ ಸ್ತ್ರೀಯರ ಶರೀರ, ಕುಟುಂಬ ಮತ್ತು ಸೊತ್ತಿನ ಮೇಲೆ ವಿಪತ್ತುಗಳು ಬಾಧಿಸುವುದು ಮುಂದುವರಿಯಲಿದೆ. ಅವರು ಪಾಪಭಾರವಿಲ್ಲದೆ ಅಲ್ಲಾಹನನ್ನು ಭೇಟಿಯಾಗುವ ತನಕ." {ಅಸ್ಸಹೀಹ್ : 280}

ಇನ್ನೊಮ್ಮೆ ಪ್ರವಾದಿ(ﷺ) ಈ ರೀತಿ ಹೇಳಿದರು, "ಯಾವುದೇ ಒತ್ತಡ ಅಥವಾ ಆಯಾಸ, ಯಾವುದೇ ತೊಂದರೆ ಅಥವಾ ಸಂಕಟ ಮುಸ್ಲಿಮನೊಬ್ಬನನ್ನು ಬಾಧಿಸದು, ಅಲ್ಲಾಹನು ಪಾಪವೊಂದನ್ನು ಪರಿಹಾರಾರ್ಥವಾಗಿ ಆತನಿಗೆ ಮನ್ನಿಸಿ ಕೊಡದ ಹೊರತು. ಮುಳ್ಳೊಂದು ಆತನಿಗೆ ಚುಚ್ಚಿದರೂ ಕೂಡ." {ಮುತ್ತಫಕುನ್ ಅಲೈಹಿ}

ಪರಲೋಕದ ಸಹಿಸಲಸಾಧ್ಯವಾದ ಭಯಾನಕ ಶಿಕ್ಷೆಯೊಂದಿಗೆ ತುಲನೆ ಮಾಡಿದರೆ ಇಹಲೋಕದಲ್ಲಿ ನಾವು ಎದುರಿಸುತ್ತಿರುವ ಕಷ್ಟ, ವ್ಯಥೆಗಳು ಕ್ಷುಲ್ಲಕವೆಂದೆನಿಸುವುದು. ಸಮೀಪವಿರುವ ಮರಣವು ಮನುಷ್ಯನ

ಇಹಲೋಕದ ಎಲ್ಲಾ ಸಂಕಷ್ಟಗಳನ್ನು ಕೊನೆಗೊಳಿಸುತ್ತದೆ. ಆದರೆ ಪರಲೋಕದ ಶಿಕ್ಷೆ, ಅದು ಶಾಶ್ವತ!

ಇಹಲೋಕದಲ್ಲಿ ನಾವು ಅನುಭವಿಸುತ್ತಿರುವ ಸಂಕಷ್ಟಗಳು ನಮ್ಮ ಪಾಪಗಳ ಒಂದು ಸಣ್ಣ ಅಂಶದ ಫಲಿತಾಂಶ ಮಾತ್ರವಾಗಿದೆ. ಮೇಲಾಗಿ ಹೆಚ್ಚಿನ ನಮ್ಮ ಧಿಕ್ಕಾರತನವನ್ನು ಅಲ್ಲಾಹನು ಇಹಲೋಕದಲ್ಲಿ ಕ್ಷಮಿಸುತ್ತಿದ್ದಾನೆ. ಕರುಣಾಮಯಿಯಾದ ಅಲ್ಲಾಹನು ಕುರ್‌ಆನ್‌ನಲ್ಲಿ ನಮಗೆ ಸೂಚಿಸುತ್ತಾನೆ:

"ನಿಮಗೆ ಯಾವೆಲ್ಲಾ ಸಂಕಷ್ಟಗಳು ತಗುಲಿದರೂ ಅದು ನಿಮ್ಮ ಕೈಗಳ ದುಡಿಮೆಯ ಫಲಿತಾಂಶವಾಗಿದೆ. ಅಲ್ಲಾಹನು ಹೆಚ್ಚಿನ ಸಂಗತಿಗಳನ್ನು ಕ್ಷಮಿಸಿಬಿಡುತ್ತಾನೆ."{ಸೂರ ಅಶ್ಶೂರಾ:30}

ನಮ್ಮ ಕುಕೃತ್ಯಗಳಿಗೆಲ್ಲ ನಾವು ಶಿಕ್ಷಿಸಲ್ಪಡುತ್ತಿದ್ದರೆ ಭೂಮಿಯಲ್ಲಿರುವವುಗಳೆಲ್ಲವೂ ನಿರ್ನಾಮವಾಗಿ ಬಿಡುತ್ತಿದ್ದವು. ಸೂರ ಫಾತಿರ್‌ನಲ್ಲಿ ಅಲ್ಲಾಹು ಹೇಳುತ್ತಾನೆ:

"ಮನುಷ್ಯನು ಮಾಡುವ ಕೃತ್ಯಗಳ ನಿಮಿತ್ತ ಅಲ್ಲಾಹು ಅವರನ್ನು ಹಿಡಿಯುತ್ತಿದ್ದರೆ ಭೂಮುಖದ ಮೇಲೆ ಒಂದೇ ಒಂದು ಜೀವಿಯನ್ನು ಅವನು ಬಿಡುತ್ತಿರಲಿಲ್ಲ. ಆದರೆ ಅಲ್ಲಾಹನು ಒಂದು ನಿರ್ಧಿಷ್ಟಾವಧಿಯವರೆಗೆ ಅವರಿಗೆ ಕಾಲಾವಕಾಶವನ್ನು ನೀಡುತ್ತಾನೆ."{ಸೂರ ಫಾತಿರ್: 45}

ಆದುದರಿಂದ, ಇದು ಅಲ್ಲಾಹನ ಅಪರಿಮಿತ ಕಾರುಣ್ಯವಾಗಿದೆ ಅವನು ನಮ್ಮ ಹೆಚ್ಚಿನ ಪಾಪಗಳನ್ನು ಮನ್ನಿಸುತ್ತಾನೆ. ಮತ್ತು ಐಹಿಕ ಜೀವನದಲ್ಲಿ ನಾವು ಅನುಭವಿಸುವ ಸಂಕಷ್ಟಗಳನ್ನು ಅಲ್ಲಾಹನು ಪರಲೋಕದ ಕಠಿಣ ಮತ್ತು ದುಸ್ಸಹ ಶಿಕ್ಷೆಗಳಿಂದ ನಮ್ಮನ್ನು ಪಾರುಮಾಡುವ ಪಾಪನಿವೃತ್ತಿ(ಪ್ರಾಯಶ್ಚಿತ)ಯನ್ನಾಗಿ ಪರಿಗಣಿಸುತ್ತಾನೆ. ಪ್ರವಾದಿ ಮುಹಮ್ಮದ್(ﷺ) ಹೇಳಿದರು, "ಅಲ್ಲಾಹು ತನ್ನ ದಾಸನೊಬ್ಬನಿಗೆ ಕ್ಷೇಮವನ್ನು (ಒಳಿತನ್ನು) ಇಚ್ಛಿಸಿದರೆ ಅವನು ಆತನ ಶಿಕ್ಷೆಯನ್ನು ಇಹಲೋಕದಲ್ಲೇ ತ್ವರಿತವಾಗಿ ನೀಡುತ್ತಾನೆ. ಇನ್ನು ಅಲ್ಲಾಹು ತನ್ನ ದಾಸನೊಬ್ಬನೊಂದಿಗೆ (ಆತನ ಪಾಪಫಲವಾಗಿ) ಪ್ರತೀಕಾರವೆಸಗಲಿಚ್ಛಿಸಿದರೆ ಆತನ ಪಾಪಗಳ ಕುರಿತಾದ ತೀರ್ಪನ್ನು ಅಂತ್ಯದಿನಕ್ಕೆ ಮುಂದೂಡುತ್ತಾನೆ."{ಸಹೀಹ್ ಅಲ್ ಜಾಮಿಈ: 308}

◆ವಿಪತ್ತುಗಳು ವಿಶ್ವಾಸಿಯೊಬ್ಬನಲ್ಲಿ ವಿನಯಶೀಲತೆ ಮತ್ತು ವಿಧೇಯತೆಯನ್ನು ಬೆಳೆಸುತ್ತದೆ. ರೋಗಭಾಧಿತನಾದ ಸಂದರ್ಭದಲ್ಲಿ ದಾಸನೊಬ್ಬ ತನ್ನ ಬಲಹೀನತೆಯನ್ನು ಮನಗಂಡು ಅಲ್ಲಾಹನ ಅಗತ್ಯತೆಯನ್ನು ಅರಿಯುತ್ತಾನೆ. ಮತ್ತು ತನ್ನ ಪ್ರಭುವಿನಲ್ಲಿ ಉತ್ತಮ ಆರೋಗ್ಯಕ್ಕಾಗಿ ಮೊರೆಯಿಡುತ್ತಾನೆ. ತದನಂತರ ದೈಹಿಕೋಲ್ಲಾಸವನ್ನೂ, ಆರೋಗ್ಯವನ್ನೂ ಮರಳಪಡೆದರೆ ಅವನು ತನ್ನ ಸಂಕಷ್ಟವನ್ನು ಶಮನಗೊಳಸಿದ ಅಲ್ಲಾಹನೊಂದಿಗೆ ಋಣಿಯಾಗಿರುತ್ತಾನೆ. ಮತ್ತು ಅಲ್ಲಾಹನ ಆರಾಧನೆಯನ್ನು ಮಾಡಲು ಕಠಿಣವಾದ ವಿಶೇಷ ಪ್ರಯತ್ನ ಮಾಡುತ್ತಾನೆ.

ಜೀವನದಲ್ಲಿ ಕಷ್ಟ ಹಾಗೂ ಪೇಚಾಟಗಳ ಯಾವುದೇ ಅನುಭವವಿಲ್ಲದವನೊಬ್ಬನಲ್ಲಿ ದರ್ಪ ಹಾಗೂ ದುರಂಹಕಾರ ಬೆಳೆಯಲು ಸಾಧ್ಯವಿದೆ. ಅಂತೆಯೇ ಜೀವನಪೂರ್ತಿ ಅಸ್ವಸ್ಥತೆಯಿಂದ ನರಳುವವನೊಬ್ಬ ಅಲ್ಲಾಹನನ್ನು ಆರಾಧಿಸುವ ಹಾಗೂ ಸ್ಮರಿಸುವ ಸದಾವಕಾಶವನ್ನು ಪಡೆಯದಿರಲೂ ಸಾಧ್ಯತೆಯಿದೆ.

ಐಹಿಕಜೀವನದಲ್ಲಿ ಸಂಕಷ್ಟಗಳು ಹಲವುರೀತಿಯ ಒಳತುಗಳನ್ನು ವಿಶ್ವಾಸಿಯೊಬ್ಬನ ಜೀವನದಲ್ಲಿ ತಂದು ಅಸಂಖ್ಯ ಅನುಗ್ರಹಗಳಗೆ ಅವನು ಪಾತ್ರನಾಗುತ್ತಾನೆ. ಇದರೊಂದಿಗೆ ವಿಶ್ವಾಸಿಯೊಬ್ಬನನ್ನು ಪಾಪಗಳಂದ ಶುದ್ಧೀಕರಿಸಿ, ಆತನನ್ನು ಆಧ್ಯಾತ್ಮಿಕ ಮತ್ತು ಭೌದ್ಧಿಕ ಉನ್ನತಿಯತ್ತ ಕೊಂಡೊಯ್ಯಲು ಐಹಿಕಜೀವನದಲ್ಲಿ ವಿಷಮತೆಗಳು ಅವಶ್ಯಕವಾಗಿದೆ ಮತ್ತು ಇದು ಅಲ್ಲಾಹನನ್ನು ನಿಷ್ಕಳಂಕನಾಗಿ ಆರಾಧಿಸಲು ಮತ್ತು ಅವನ ಧರ್ಮ(ದೀನ್)ವನ್ನು ಸಂಸ್ಥಾಪಿಸಲು ಸಹಾಯಕವಾದ ಅಂಶವಾಗಿದೆ. ಈ ಕಾರಣದಿಂದಾಗಿ ಎಲ್ಲಾ ಪ್ರವಾದಿಗಳು ಮತ್ತು ಅವರ ಅನುಚರರು ಸಂಕಷ್ಟಗಳು ಭಾಧಿಸಿದಾಗ ದುಃಖಿತರಾಗದೆ ತಾಳ್ಮೆಯಿಂದ ಸಂಧರ್ಭೋಚಿತವಾಗಿ ಜೀವಿಸುತ್ತಿದ್ದರು. ಪ್ರವಾದಿ(ﷺ) ಹೇಳುತ್ತಾರೆ, "ಪ್ರವಾದಿಗಳು ಹಾಗೂ ಅವರ ನಂತರದ ಸಾತ್ವಿಕರು ಅತ್ಯಂತ ಹೆಚ್ಚು (ಸಂಕಷ್ಟಗಳ ಮೂಲಕ) ಪರೀಕ್ಷಿಸಲ್ಪಟ್ಟವರಾಗಿದ್ದರು. ನಿಶ್ಚಯವಾಗಿಯೂ, ಅವರಲ್ಲಿ ಕೆಲವರು ದಾರಿದ್ರ್ಯದ ಮೂಲಕ ಯಾವರೀತಿ

ಪರೀಕ್ಷಿಸಲ್ಪಟ್ಟದ್ದರೆಂದರೆ ಹರಕು ಬಟ್ಟೆಯ ವಸ್ತ್ರಗಳ ಹೊರತು ಧರಿಸಲು ಅವರಲ್ಲಿ ಬೇರೇನೂ ಇರಲಿಲ್ಲ. ಆದರೂ ನೀವು ನೆಮ್ಮದಿಯುತ ಜೀವನದಲ್ಲಿ ತೃಪ್ತಿಯನ್ನು ಹೊಂದುವ ರೀತಿಯಲ್ಲಿ ಅವರು ಸಂಕಷ್ಟಗಳ ವೇಳೆಗಳಲ್ಲೂ ತೃಪ್ತಿಯನ್ನು ಹೊಂದಿದ್ದರು."{**ಅಸ್ಸಹೀಹ್**: 144}

# ವಿಪತ್ತನ್ನು ಆಶಿಸುವುದು ವಿಶ್ವಾಸಿಗೆ ಸಲ್ಲ

ಸಂಕಷ್ಟಗಳು ಐಹಿಕ ಜೀವನದಲ್ಲಿ ನಾನಾವಿಧದ ಒಳಿತುಗಳನ್ನು ನೀಡಿ ಪರಲೋಕದಲ್ಲಿ ಅಲ್ಲಾಹನ ಭಯಾನಕ ಶಿಕ್ಷೆಗಳಿಂದ ಪಾರು ಮಾಡಬಲ್ಲುದು ಎಂದೆಣಿಸಿ ವಿಪತ್ತುಗಳನ್ನು ಆಶಿಸುವುದು ಮತ್ತು ಅನುಭವಿಸುವುದು ಯುಕ್ತ ಎಂದು ತೋರಬಹುದು. ಆದರೆ ವಿಶ್ವಾಸಿಯೊಬ್ಬನು ವಿಪತ್ತುಗಳನ್ನು ಆಶಿಸುವುದು ಅನುವದನೀಯವಲ್ಲ. ಪ್ರಥಮವಾಗಿ ಇದಕ್ಕೆ ಕಾರಣವೇನೆಂದರೆ ಸಂಕಷ್ಟದ ಸಂದರ್ಭದಲ್ಲಿ ಮನುಷ್ಯನೊಬ್ಬನು ಕೃತಘ್ನತೆ ಹಾಗೂ ಅವಿಶ್ವಾಸದ ದಾರಿಗೇಡಿಗೆ ತಳ್ಳಲ್ಪಡುವ ಸಾಧ್ಯತೆಯೂ ಇದೆ. ಅದೂ ಅಲ್ಲದೆ ಐಹಿಕ ಜೀವನದಲ್ಲಿ ತಾನು ಮಾಡಿಟ್ಟ ಪಾಪಗಳ ಸಂಪೂರ್ಣ ಶಿಕ್ಷೆಯನ್ನು ಇಲ್ಲಿಯೇ ಅನುಭವಿಸಿ ತೀರಲು ಯಾರಿಗೂ ಸಾಧ್ಯವಿಲ್ಲ. ಎರಡನೆಯದಾಗಿ ವಿಪತ್ತು (ಸಂಕಷ್ಟ)ಗಳನ್ನು ಆಶಿಸುವುದೆಂಬುವುದು ಇಸ್ಲಾಮಿನ ಸರಳ ಮತ್ತು ಕ್ಷಮಾಪೂರ್ಣ ಸ್ವರೂಪದೊಂದಿಗೆ ಬೆಸೆಯಲು ಸಾಧ್ಯವಿಲ್ಲ. ನಮಗೆ ಸುಸ್ಥಿತಿ ಹಾಗೂ ಕ್ಷಮೆಗಾಗಿ ಪ್ರಾರ್ಥಿಸುವಂತೆ ಉಪದೇಶಿಸಲಾಗಿದೆ. ಉನ್ನತನಾದ ಅಲ್ಲಾಹು ಈ ರೀತಿ ಪ್ರಾರ್ಥಿಸುವಂತೆ ಕುರ್‌ಆನ್‌ನಲ್ಲಿ ನಮಗೆ ಭೋಧಿಸುತ್ತಾನೆ;

"ಓ,ನಮ್ಮ ಪಾಲಕಪ್ರಭುವೇ! ನಾವು ಪ್ರಮಾದವೆಸಗಿದರೆ ಇಲ್ಲವೇ ತಪ್ಪೆಸಗಿದರೆ ನಮ್ಮನ್ನು ನೀನು ಹಿಡಿಯದಿರು. ನಮ್ಮ ಪಾಲಕಪ್ರಭುವೇ! ನಮ್ಮ ಮುಂಚಿನವರ (ಯಹೂದಿಗಳು,ಕ್ರೈಸ್ತರು) ಮೇಲೆ ಹೊರಿಸಿದಂತಹ ಭಾರವನ್ನು ನಮ್ಮ ಮೇಲೆ ಹೊರಿಸದಿರು. ನಮ್ಮ ಪಾಲಕಪ್ರಭುವೇ! ನಮಗೆ ವಹಿಸಿಕೊಳ್ಳಲು ಸಾಮರ್ಥ್ಯವಿಲ್ಲದಂತಹ ಭಾರವನ್ನು ನಮ್ಮ ಮೇಲೆ

ಹೇರದಿರು, ನಮ್ಮಿಂದ ಪಾಪವನ್ನು ಅಳಿಸು, ನಮಗೆ ಕ್ಷಮೆ ನೀಡು ಮತ್ತು ನಮ್ಮ ಮೇಲೆ ಕರುಣೆ ತೋರು. ನೀನೇ ನಮ್ಮ ಒಡೆಯನಾಗಿರುವೆ, ನಮಗೆ ಸತ್ಯನಿಷೇಧಿಗಳಾದ ಜನರ ವಿರುದ್ಧ ಸಹಾಯ ನೀಡು."
{ಸೂರ ಅಲ್-ಬಕರ: 286}

ಆದುದರಿಂದ ವಿಶ್ವಾಸಿಯೊಬ್ಬ ಅಲ್ಲಾಹನ ಅಪಾರ ಕರುಣೆ ಹಾಗೂ ಕ್ಷಮಾಗುಣಗಳ ಅನುಕೂಲತೆಗಳನ್ನು ಉಪಯೋಗಿಸಿಕೊಳ್ಳಬೇಕಾಗಿದೆ. ಅನಸ್(ﷺ)ವರದಿ ಮಾಡಿರುತ್ತಾರೆ, "ಪ್ರವಾದಿ(ﷺ)ಯವರು ಒಮ್ಮೆ ಕೃಶಕಾಯ ಹಾಗೂ ದುರ್ಬಲರಾದ (ಸ್ಥೂಲಕಾಯದ) ವ್ಯಕ್ತಿಯೊಬ್ಬರನ್ನು ಸಂದರ್ಶಿಸಿದರು. (ಈ ಹದೀಸಿನಲ್ಲಿ ವರ್ಣಿಸಿದಂತೆ) ಪ್ರವಾದಿ(ﷺ) ಆ ವ್ಯಕ್ತಿಯೊಂದಿಗೆ ಕೇಳಿದರು, 'ತಾವು ಅಲ್ಲಾಹನಲ್ಲಿ ಯಾವುದಾದರೂ ವಿಶಿಷ್ಟ ಪ್ರಾರ್ಥನೆಯನ್ನು ಮಾಡುತ್ತಿರುವಿರಾ'? (ಯಾಕೆಂದರೆ ನೀವು ಈ ರೀತಿ ದುರ್ಬಲರಾಗಿರುವಿರಿ). ಆಗ ಆ ವ್ಯಕ್ತಿ ಉತ್ತರಿಸಿದರು, 'ಹೌದು, ನಾನು ಈ ರೀತಿ ಪ್ರಾರ್ಥಿಸುತ್ತಿದ್ದೇನೆ, 'ಓ ಅಲ್ಲಾಹನೇ ನನಗಾಗಿ ಪರಲೋಕದಲ್ಲಿ ನೀನು ನಿಶ್ಚಯಿಸಿಟ್ಟ ಶಿಕ್ಷೆಗಳೇನಿವೆಯೋ ಅವೆಲ್ಲವನ್ನು ಈ ಇಹಲೋಕದಲ್ಲೇ ನೀಡಿಬಿಡು.' ಇದನ್ನು ಆಲಿಸಿದ ಅಲ್ಲಾಹನ ಸಂದೇಶವಾಹಕರು(ﷺ) ಹೇಳಿದರು, 'ಸರ್ವಸ್ತುತಿಗಳು ಅಲ್ಲಾಹನಿಗೆ! ನೀವು ಈ ರೀತಿ ಪ್ರಾರ್ಥಿಸುವಂತಿಲ್ಲ. ಬದಲಾಗಿ ಈ ರೀತಿ ಪ್ರಾರ್ಥಿಸಿ:

﴿ رَبَّنَآ ءَاتِنَا فِى ٱلدُّنْيَا حَسَنَةً وَفِى ٱلْـَٔاخِرَةِ حَسَنَةً
وَقِنَا عَذَابَ ٱلنَّارِ ٢٠١ ﴾

'ನಮ್ಮ ಪಾಲಕಪ್ರಭುವೇ, ನಮಗೆ ಇಹಲೋಕದಲ್ಲೂ, ಪರಲೋಕದಲ್ಲೂ ಒಳಿತನ್ನು ದಯಪಾಲಿಸು. ಮತ್ತು ನಮ್ಮನ್ನು ನರಕಾಗ್ನಿಯಿಂದ ರಕ್ಷಿಸು'
{ಸೂರ ಅಲ್-ಬಕರ:201}

ಪ್ರವಾದಿ(ﷺ)ಯವರು ತದನಂತರ ಅಲ್ಲಾಹನಲ್ಲಿ ಆ ವ್ಯಕ್ತಿಯನ್ನು ಗುಣಪಡಿಸುವಂತೆ ಬೇಡಿಕೊಂಡರು ಮತ್ತು ಅಲ್ಲಾಹು ಅವರನ್ನು ಸ್ವಸ್ಥಪಡಿಸಿದನು." {ಸಹೀಹ್ ಮುಸ್ಲಿಮ್}

# ಅಲ್ಲಾಹು ನಿಶ್ಚಿಂತತೆಯನ್ನು ದಯೆಪಾಲಿಸಿದರೆ...

ಜೀವನದಲ್ಲಿ ನಿಶ್ಚಿಂತತೆ ಹಾಗೂ ನೆಮ್ಮದಿಯನ್ನು ಪಡೆದರೆ ವಿಶ್ವಾಸಿಯೊಬ್ಬನು ಅಲ್ಲಾಹನಿಗೆ ಕೃತಜ್ಞನಾಗಿರಬೇಕು. ಹೇಗಿದ್ದರೂ, ವ್ಯಕ್ತಿಯೊಬ್ಬನು ಜೀವನದಲ್ಲಿ ಪಡೆಯುವ ಸುಸ್ಥಿತಿಯು ಅವನ ಧರ್ಮನಿಷ್ಠೆ ಮತ್ತು ನಿಷ್ಕಪಟತೆಗೆ ಸಂದ ಪ್ರತಿಫಲ ಎಂದು ಪರಿಗಣಿಸುವಂತಿಲ್ಲ. ಯಾಕೆಂದರೆ ಇಹಲೋಕ ಜೀವನದ ಪರೀಕ್ಷೆಯು ಕೇವಲ ಸಂಕಷ್ಟಗಳು ಹಾಗೂ ವಿಪತ್ತುಗಳಿಗೆ ಪರಿಮಿತಗೊಂಡಿಲ್ಲ. ವಾಸ್ತವದಲ್ಲಿ ಮನುಷ್ಯನು ಪಡೆಯುವ ಅಭ್ಯುದಯ, ಐಶ್ವರ್ಯ ಹಾಗೂ ಸುಸ್ಥಿತಿಗಳು ಕೂಡ ಇಲ್ಲಿನ ಪರೀಕ್ಷೆಯ ಒಂದು ಭಾಗವಾಗಿದೆ. ಅಲ್ಲಾಹನು ಪವಿತ್ರ ಕುರ್‌ಆನಿನಲ್ಲಿ ಹೇಳುತ್ತಾನೆ;

﴿ وَنَبۡلُوكُم بِٱلشَّرِّ وَٱلۡخَيۡرِ فِتۡنَةٗۖ وَإِلَيۡنَا تُرۡجَعُونَ ٣٥ ﴾

"ನಾವು ನಿಮ್ಮನ್ನು ಪರೀಕ್ಷಾರ್ಥವಾಗಿ ಕೆಡುಕು ಹಾಗೂ ಒಳಿತುಗಳ ಮೂಲಕ ಪರೀಕ್ಷಿಸಲಿದ್ದೇವೆ, ಮತ್ತು ನಿಮ್ಮ ಮರಳುವಿಕೆ ನಮ್ಮ ಕಡೆಗಾಗಿದೆ."{ಸೂರ ಅಲ್‌-ಅಂಬಿಯಾ: 35}

ಇದರ ಸಾರಾಂಶವೇನೆಂದರೆ, ಯಾರು ಕೃತಜ್ಞರಾಗಿರುತ್ತಾರೆ ಮತ್ತು ಯಾರು ಕೃತಘ್ನರಾಗಿದ್ದಾರೆ, ಯಾರು ಸಹನಾಶೀಲತೆಯನ್ನು ಹೊಂದಿದ್ದಾರೆ ಮತ್ತು ಯಾರೂ ಹತಾಶ ಮನೋಭಾವದಿಂದ ಎದೆಗುಂದುತ್ತಾರೆ ಎಂದು ಪರೀಕ್ಷಿಸಲು ಅಲ್ಲಾಹನು ನಮ್ಮನ್ನು ಕೆಲವೊಮ್ಮೆ ಸುಸ್ಥಿತಿ ಹಾಗೂ ಮತ್ತೆ ಕೆಲವು ಸಲ ಸಂಕಷ್ಟಗಳ ಮೂಲಕ ಪರೀಕ್ಷಿಸುತ್ತಾನೆ.

ಅಲೀ ಬಿನ್ ಅಬೀತಾಲಿಬ್ (ﷺ), ಇಬ್ನು ಅಬ್ಬಾಸ್(ﷺ)ರವರಿಂದ ವರದಿ ಮಾಡಿರುತ್ತಾರೆ, “ಅಲ್ಲಾಹನು ನಿನ್ನನ್ನು ಸಂಕಷ್ಟ ಮತ್ತು ಏಳಿಗೆ, ಆರೋಗ್ಯ ಮತ್ತು ರೋಗ, ಶ್ರೀಮಂತಿಕೆ ಮತ್ತು ಬಡತನ, ನ್ಯಾಯ ಮತ್ತು ಅನ್ಯಾಯ, ವಿಧೇಯತೆ ಮತ್ತು ಪಾಪ, ಮಾರ್ಗದರ್ಶನ ಮತ್ತು ದಾರಿಗೇಡುಗಳ ಮೂಲಕ ಪರೀಕ್ಷಿಸುತ್ತಾನೆ.” {ತಫ್ಸೀರ್ ಇಬ್ನು ಕಸೀರ್}

# ಅನುಗ್ರಹ ಅಥವಾ ಶಿಕ್ಷೆ

ಸಂಕಷ್ಟಗಳೆದುರಾದಾಗ ಸಹನೆ ಮತ್ತು ವಿಧೇಯತೆಯನ್ನು ಪ್ರದರ್ಶಿಸುವ ವಿಶ್ವಾಸಿಗೆ ಅದರ ಪ್ರತಿಫಲ ಹಾಗೂ ಅನುಗ್ರಹಗಳು ಲಭಿಸುತ್ತವೆ. ಅಲ್ಲಾಹನ ವಿಧಿಯೊಂದಿಗೆ ತೋರುವ ಅತೃಪ್ತಿ ಹಾಗೂ ಅಸಹಿಷ್ಣುತೆಯು ನಮ್ಮನ್ನು ಅವನ ಕ್ರೋಧ ಹಾಗೂ ಶಿಕ್ಷೆಗೆ ಈಡಾಗಿಸುತ್ತದೆ. ಅಲ್ಲಾಹನ ಪ್ರವಾದಿ(ﷺ) ಹೇಳಿದರು, "ನಿಶ್ಚಯವಾಗಿಯೂ ಪ್ರತಿಫಲದ ಪ್ರಮಾಣವು ಬಾಧಿಸಿದ ವಿಪತ್ತಿನ ಪ್ರಮಾಣದಷ್ಟೇ ಆಗಿರುತ್ತದೆ. ವಾಸ್ತವದಲ್ಲಿ ಅಲ್ಲಾಹನು ಯಾವುದಾದರೂ ಜನತೆಯನ್ನು ಪ್ರೀತಿಸಿದರೆ ಪರೀಕ್ಷಾರ್ಥ ಅವರಿಗೆ ವಿಪತ್ತು ಭಾಧಿಸುವಂತೆ ಮಾಡುತ್ತಾನೆ. ಅಂತಹ ಸ್ಥಿತಿಯಲ್ಲಿ (ಅಲ್ಲಾಹನವಿಧಿಯಲ್ಲಿ) ಸಂತೃಪ್ತಿಯನ್ನು ತೋರ್ಪಡಿಸುವವರಿಗೆ ಅಲ್ಲಾಹನ ಸಂತೃಪ್ತಿ ಲಭ್ಯವಾಗುವುದು. ಯಾರು ಅಸಹನೆ ತೋರುತ್ತಾರೋ ಅವರ ಮೇಲೆ ಅಲ್ಲಾಹನ ಕೋಪವಿರುವುದು" {**ಸಹೀಹ್** 146}

ಆದುದರಿಂದ ಅಲ್ಲಾಹನ ಪ್ರೀತಿಯನ್ನು ಸಂಪಾದಿಸುವ ಸದಾವಕಾಶವನ್ನು ಸ್ವಾಧೀನಪಡಿಸಿಕೊಳ್ಳುವುದು ಅಥವಾ ದುಃಖಾವಸ್ಥೆಯನ್ನು ಎದುರಿಸಲು ಸನ್ನದ್ಧನಾಗುವುದು, ಇವೆರಡರಲ್ಲಿ ಒಂದನ್ನು ಆರಿಸಿಕೊಳ್ಳುವುದು ದಾಸನೊಬ್ಬನ ಮೇಲೆ ಅವಲಂಬಿತವಾಗಿರುತ್ತದೆ.

# ಅಲ್ಲಾಹನ ತೃಪ್ತಿ ಹಾಗೂ ಅನುಗ್ರಹದ ಗಳಿಕೆಗಾಗಿ

# ಸಬ್ರ್

"ಸಬ್ರ್" ಎಂಬುವುದು ಒಂದು ಅರಬಿ ಪದವಾಗಿದೆ. ಈ ಪದವು "ಕಾಯುವಂತೆ ಮಾಡು, (ಬಂಧನದಲ್ಲಿಡು) ಗೊಡವೆಗೆ ಹೋಗದಿರು, ಅಥವಾ ತಡೆಹಿಡಿ" ಎಂಬ ಶಬ್ಧಾರ್ಥಗಳ ಮೂಲದಿಂದ ಬಂದಿದೆ. ಇಸ್ಲಾಮಿ ಪದಜ್ಞಾನದ ಪ್ರಕಾರ "ಸಬ್ರ್" ಅಂದರೆ ಹತಾಶೆ ಹಾಗೂ ನಿಷ್ಕಾರಣವಾದ ಭಯಗಳಿಂದ ಸ್ವಯಂ ತನ್ನನ್ನು ತಡೆದುಕೊಳ್ಳುವುದು, ಆಕ್ಷೇಪಣೆಗಳಿಂದ ನಾಲಗೆಯನ್ನು ಹತೋಟಿಯಲ್ಲಿಟ್ಟುಕೊಳ್ಳುವುದು, ಮುಖಕ್ಕೆ ಹೊಡೆದುಕೊಂಡು ವಿಲಾಪಿಸದಿರುವುದು, ದುಃಖ ಹಾಗೂ ಮಾನಸಿಕ ವ್ಯಥೆಯ ಸಂದರ್ಭದಲ್ಲಿ ಉಟ್ಟ ವಸ್ತ್ರವನ್ನು ಹರಿದುಕೊಳ್ಳದಿರುವುದು... ಇತ್ಯಾದಿಗಳಾಗಿವೆ.

ಸಬ್ರ್ ಎಂಬ ಅತ್ಯುತ್ತಮ ಗುಣವನ್ನು ಅಧೀನಪಡಿಸಿಕೊಂಡವರು ವಾಸ್ತವದಲ್ಲಿ ಅನುಗ್ರಹೀತರು. ಅಲ್ಲಾಹನ ಪ್ರವಾದಿ(ﷺ) ಹೇಳಿರುವುದಾಗಿ ವರದಿಯಾದ ಹದೀಸ್ ಒಂದು ಈ ರೀತಿಯಿದೆ, "ಸಹನಾಶೀಲತೆಗಿಂತ ಶ್ರೇಷ್ಟ ಹಾಗೂ ವಿಶಾಲವಾದ ಉಡುಗೋರೆಯನ್ನು ಯಾವೊಬ್ಬನೂ ಪಡೆದಿಲ್ಲ." {ಸಹೀಹ್ ಅಲ್-ಬುಖಾರಿ}

ಸರ್ವಶಕ್ತನಾದ ಅಲ್ಲಾಹನು 'ಸಾಬಿರೂನ್'(ತಾಳ್ಮೆ ವಹಿಸುವವರು)ಗಳಿಗೆ ತೂಕ ಮತ್ತು ಅಳತೆ ಮಾಡಲಾಗದ ಹೇರಳವಾದ ಪ್ರತಿಫಲ ನೀಡುವ ವಾಗ್ದಾನವಿತ್ತಿದ್ದಾನೆ. ಅಲ್ಲಾಹನು ಕುರ್‌ಆನ್‌ನಲ್ಲಿ ಪ್ರಖ್ಯಾಪಿಸುತ್ತಾನೆ:

﴿إِنَّمَا يُوَفَّى ٱلصَّٰبِرُونَ أَجۡرَهُم بِغَيۡرِ حِسَابٖ ١٠﴾

"ಸಹನಾಶೀಲರಿಗೆ ಮಾತ್ರ ಅವರ ಪ್ರತಿಫಲವನ್ನು ಲೆಕ್ಕಾತೀತವಾಗಿ ನೀಡಲಾಗುವುದು."{ಸೂರ ಅಝ್ಝುಮರ್:10}

ವಿಪತ್ತು ಬಾಧಿಸುವ ಪ್ರಾಥಮಿಕ ಘಟ್ಟದಲ್ಲೇ ಪ್ರತಿಫಲದ ಕುರಿತು ವಾಗ್ದಾನ ನೀಡಲ್ಪಟ್ಟ ಯಥಾರ್ಥ ಸಹನೆ(ಸಬ್ರ್)ಯನ್ನು ವಹಿಸಲು ನಾವು ರೂಡಿಸಿಕೊಳ್ಳಬೇಕಾಗಿದೆ. ವಿಪತ್ತು ಅಥವಾ ಸಂಕಷ್ಟದ ಬಗ್ಗೆ ಪ್ರಥಮವಾಗಿ ಕೇಳುವಾಗ ಅಥವಾ ಅರಿಯುವಾಗ ಈ ಸಬ್ರ್ ನಮ್ಮನ್ನು ಆವರಿಸಿಕೊಳ್ಳಬೇಕು. ದುಃಖತಪ್ತ ಹೃದಯವೇದನೆಯಿಂದಾಗಿ ದಾಸನೊಬ್ಬ ಭಯ ಹಾಗೂ ಹತಾಶೆಗೊಳಗಾಗಬಾರದು. ಅಲ್ಲಾಹನ ತೀರ್ಪಿನಲ್ಲಿ ಅವನು ಸಮಾಧಾನ ಮತ್ತು ಸಹನೆಯನ್ನು ಕೈಗೊಳ್ಳಬೇಕು.

ಆರಂಭಿಕ ಆಘಾತದ ನಂತರ ದುಃಖವು ಕ್ಷೀಣಿಸಿದಾಗ ವಹಿಸುವ ತಾಳ್ಮೆ ಸಂಪೂರ್ಣ ಸಹನೆಯೆನಿಸುವುದಿಲ್ಲ. ವಿಪತ್ತಿನ ದುಃಖದಿಂದ ಆಘಾತಗೊಂಡ ಸಂದರ್ಭವಾಗಿದೆ ಸಹನೆ ಮತ್ತು ತಾಳ್ಮೆಯ ನಿಜವಾದ ಪರೀಕ್ಷಾ ಸಮಯ. ಪ್ರವಾದಿ(ﷺ) ಹೇಳಿದರು, "ಯಥಾರ್ಥ ಸಹನೆ (ವಿಪತ್ತಿನ ಕುರಿತು ಅರಿತ, ಬಾಧಿಸಿದ) ಪ್ರಥಮ ಘಟ್ಟದಲ್ಲಾಗಿದೆ." {ಸಹೀಹ್ ಅಲ್-ಬುಖಾರಿ}

ಪ್ರತಿಯೊಬ್ಬ ವ್ಯಕ್ತಿಯೂ ಸ್ವಇಚ್ಛೆಯಿಂದ ಅಥವಾ ಇಚ್ಛಾರಹಿತವಾಗಿ ತಾಳ್ಮೆಯನ್ನು ಅಭ್ಯಸಿಸಿಕೊಂಡವನಾಗಿದ್ದಾನೆ. ಆದರೆ ಆರಂಭಘಟ್ಟದಲ್ಲಿಯೇ ಸ್ವಇಚ್ಛೆಯಿಂದ ತಾಳ್ಮೆಯನ್ನು ಕೈಗೊಂಡವನು ವಿವೇಕಿಯೆನಿಸಿಕೊಳ್ಳುತ್ತಾನೆ. ಏಕೆಂದರೆ ತಾಳ್ಮೆ ವಹಿಸುವುದರಿಂದುಂಟಾಗುವ ಒಳಿತನ್ನು ಅವನು ಚೆನ್ನಾಗಿ ಅರಿತುಕೊಂಡಿರುತ್ತಾನೆ. ಸಹನೆ ಕೈಗೊಂಡ ಕಾರಣದಿಂದ ಪುರಸ್ಕರಿಸಲ್ಪಡಲಿದ್ದೇನೆಂದೂ, ಅಸಹನೆಯನ್ನು ತೋರ್ಪಡಿಸಿದರೆ ಅಲ್ಲಾಹನ ಕೋಪಕ್ಕೀಡಾಗುವ ಸಾಧ್ಯತೆಯಿದೆಯೆಂದೂ ಅವನು ತಿಳಿದಿರುತ್ತಾನೆ. ತಾಳ್ಮೆಗೇಡು ಮತ್ತು ಹತಾಶೆಯನ್ನು ಪ್ರದರ್ಶಿಸುವ ಮೂಲಕ ನಷ್ಟವಾದುದನ್ನು ಮರಳಿಪಡೆಯಲು ಹಾಗೂ ಅಲ್ಲಾಹನು ವಿಧಿಸಿದ್ದನ್ನು ಬದಲಾಯಿಸಲು ಸಾಧ್ಯವಿಲ್ಲ ಎಂಬ ಜ್ಞಾನವನ್ನು ಅವನು ಹೊಂದಿರುತ್ತಾನೆ.

ವಿಪತ್ತುಗಳನ್ನು ಅಭಿಮುಖೀಕರಿಸುವ ಸಂದರ್ಭದಲ್ಲಿ ವ್ಯಸನತೆಯನ್ನು ತೋರ್ಪಡಿಸಿ, ಗೊಣಗಾಡಿ ಕೊನೆಗೆ ಯಾವುದೇ ಆಯ್ಕೆಯುಳಿದಿಲ್ಲವೆನ್ನುವಾಗ ಸಹನೆಯನ್ನು ತೋರ್ಪಡಿಸುವವನು ಮೂರ್ಖನೆಂದೆನಿಸಿಕೊಳ್ಳುತ್ತಾನೆ. ಈ ರೀತಿಯ ಸಬ್ರ್ (ಸಹನೆ) ಯಾವುದೇ ಒಳಿತನ್ನುಂಟು ಮಾಡದು.

# ಅಲ್ಲಾಹನ ತೃಪ್ತಿ ಹಾಗೂ ಅನುಗ್ರಹದ ಗಳಿಕೆಗಾಗಿ

# ಇಹ್ತಿಸಾಬ್

ಯಾವುದೇ ಸಂಕಟಗಳು ಬಂದರೂ ಅದು ಉಂಟುಮಾಡುವ ದುಃಖ ಹಾಗೂ ವ್ಯಥೆಯನ್ನು ಗಣನೆಗೆ ತೆಗೆದುಕೊಳ್ಳದೆ ಅಲ್ಲಾಹನ ಅಪಾರ ಅನುಗ್ರಹ ಮತ್ತು ಕ್ಷಮೆಯ ಫಳಿಗೆ ಮುಂದೆ ಖಂಡಿತವಾಗಿಯೂ ಬರಲಿದೆ ಎಂಬ ಪ್ರತಿಫಲಾಪೇಕ್ಷೆಯನ್ನು ಹೊಂದಿದ ಪ್ರತೀಕ್ಷೆಯನ್ನು "ಇಹ್ತಿಸಾಬ್" ಎನ್ನಲಾಗುತ್ತದೆ. ಅಲ್ಲಾಹನ ಸಂದೇಶವಾಹಕರಾದ ಮುಹಮ್ಮದ್(ﷺ) ಹೇಳಿರುವುದಾಗಿ ಸಹೀಹ್ ಬುಖಾರಿಯಲ್ಲಿ ದಾಖಲಿಸಲ್ಪಟ್ಟದ್ದು ನೋಡಿ, "ಅಲ್ಲಾಹನು ಸತ್ಯವಿಶ್ವಾಸಿಯೊಬ್ಬನ ಭೂಮಿಯಲ್ಲಿರುವ ಪ್ರೀತಿಪಾತ್ರರಲ್ಲಿ ಒಬ್ಬರನ್ನು ವಶಪಡಿಸಿಕೊಂಡರೆ ಮತ್ತು ಅವನು (ಆ ವಿಶ್ವಾಸಿಯು) ಸಹನೆ ಹಾಗೂ ಪ್ರತಿಫಲಾಪೇಕ್ಷೆಯನ್ನು ತೋರ್ಪಡಿಸಿದರೆ ಅವನಿಗೆ ಅಲ್ಲಾಹನು ಸ್ವರ್ಗಕ್ಕಿಂತ ಕಡಿಮೆಯಿರುವ ಯಾವುದೇ ಪ್ರತಿಫಲವನ್ನು ಒಪ್ಪಲಾರನು." {ಸಹೀಹ್ ಅಲ್–ಬುಖಾರಿ}

ಫಿರ್‌ಔನನ ಪತ್ನಿಯಾದ ಆಸಿಯಾರವರ ಉದಾಹರಣೆಯನ್ನು ಗಣನೆಗೆ ತೆಗೆದುಕೊಳ್ಳೋಣ. ಅಲ್ಲಾಹನ ಏಕತ್ತ್ವವನ್ನು ಅಂಗೀಕರಿಸಿದ ಕಾರಣಕ್ಕಾಗಿ ಆಸಿಯಾರವರು ಅವರ ಪತಿಯೂ, ಚಕ್ರವರ್ತಿಯೂ ಆಗಿದ್ದ ಫಿರ್‌ಔನನಿಂದ ನಾನಾತರದಲ್ಲಿ ಪೀಡಿಸಲ್ಪಟ್ಟರು. ಕಠೋರ ಯಾತನೆಯ ವೇದನೆ ಹಾಗೂ ವ್ಯಥೆಯ ಹೊರತಾಗಿಯೂ ಆಸಿಯಾರವರು ತಮ್ಮ ವಿಶ್ವಾಸದಲ್ಲಿ ದೃಢವಾಗಿ ನೆಲೆನಿಂತರು. ಅಪಾರ ತಾಳ್ಮೆಯನ್ನು ಪ್ರದರ್ಶಿಸುತ್ತಾ ಅವರು "ಇಹ್ತಿಸಾಬ್" ಅನ್ನು ಕೈಗೊಂಡರು. ಅಲ್ಲಾಹನೊಂದಿಗೆ ಪ್ರಾರ್ಥಿಸುತ್ತಾ ಸ್ವರ್ಗದಲ್ಲಿ ತನಗಾಗಿ ಭವನವೊಂದನ್ನು ಬೇಡಿಕೊಂಡರು. ಆ ಸಾತ್ವಿಕ ಮಹಿಳೆಯ ವೃತ್ತಾಂತವನ್ನು ಅಲ್ಲಾಹನು ಕುರ್‌ಆನ್‌ನಲ್ಲಿ ಈ ರೀತಿ ವಿವರಿಸುತ್ತಾನೆ:

“ಮತ್ತು ಅಲ್ಲಾಹು ಸತ್ಯವಿಶ್ವಾಸಿಗಳಿಗೆ ಫಿರ್‌ಔನನ ಪತ್ನಿಯ ಉಪಮೆಯನ್ನು ನೀಡುತ್ತಾನೆ. ಅವರು ಪ್ರಾರ್ಥಿಸಿದ ಸಂದರ್ಭ; ‘ನನ್ನ ಪಾಲಕ ಪ್ರಭುವೇ, ನೀನು ನನಗಾಗಿ ನಿನ್ನ ಬಳಿ ಸ್ವರ್ಗದಲ್ಲಿ ಭವನವನ್ನು ನಿರ್ಮಿಸು, ಫಿರ್‌ಔನನ ಮತ್ತು ಆತನ ಕೃತ್ಯ (ದುಷ್ಕೃತ್ಯ)ದಿಂದಲೂ ನನ್ನನ್ನು ಪಾರುಮಾಡು. ಮತ್ತು ಅಕ್ರಮಿಗಳಾದ ಜನರಿಂದ ನನ್ನನ್ನು ರಕ್ಷಿಸು.” {ಸೂರ ಅತ್ತಹ್‌ರೀಮ್:11}

ಈ ದುವಾ(ಪ್ರಾರ್ಥನೆ)ದೊಂದಿಗೆ ಆಸಿಯಾರವರು ಅಲ್ಲಾಹನಿಗೆ ಮೊರೆಯಿಟ್ಟಾಗ, ಆಕಾಶವು ಅವರಿಗಾಗಿ ತೆರೆಯಲ್ಪಟ್ಟಿತು ಮತ್ತು ಅವರು ಸ್ವರ್ಗದಲ್ಲಿರುವ ತನ್ನ ಭವನವನ್ನು ದರ್ಶಿಸಿದರು. ಆ ಸುಂದರ ಭವನವನ್ನು ಕಂಡಾಗ ಅವರ ಮುಖಾರವಿಂದದಲ್ಲಿ ಮುಗುಳ್ನಗೆಯೊಂದು ಮಿಂಚಿತು. ಆಗ ಫಿರ್‌ಔನನು ದೊಡ್ಡ ಕಲ್ಲೊಂದನ್ನು (ಬಂಡೆ) ತಂದು ಆಸಿಯಾರವರ ಮೇಲೆ ಹಾಕಿ ಜಜ್ಜಿ ಸಾಯಿಸುವಂತೆ ತನ್ನ ಸೇವಕರಿಗೆ ಆಜ್ಞಾಪಿಸಿದನು. ಆದರೆ ಬಂಡೆಯು ಅವರ ಮೇಲೆ ಹಾಕಲ್ಪಡುವ ಮುಂಚೆಯೇ ಸರ್ವಶಕ್ತನಾದ ಅಲ್ಲಾಹು ಅವರ ಪ್ರಾಣವನ್ನು ತೆಗೆದನು. ಈರೀತಿ ಅಲ್ಲಾಹನು ಎರಡು ರೀತಿಯ ಅನುಗ್ರಹಗಳನ್ನು ಆಸಿಯಾರವರಿಗೆ ಅವರ “ಇಹ್ತಿಸಾಬ್”ನ ಪ್ರತಿಫಲವೆಂಬಂತೆ ನೀಡಿದನು. ಸ್ವರ್ಗದಲ್ಲೊಂದು ಭವನ ಹಾಗೂ ಫಿರ್‌ಔನನ ಕಪಟ ಯೋಜನೆಯಿಂದ ರಕ್ಷಣೆ. ಈ ಪ್ರಕಾರ ಆಸಿಯಾರವರು ಅವರ ನಂತರ ಅಂತ್ಯದಿನದವರೆಗೂ ಬರುವ ಸರ್ವಮನುಷ್ಯರಿಗೂ ಒಂದು ಅತ್ಯುತ್ತಮ ಮಾದರಿಯಾದರು. [ಅತ್ತಬರಿ 23:500 ನೋಡಿ]

## ಅಲ್ಲಾಹನ ತೃಪ್ತಿ ಹಾಗೂ ಅನುಗ್ರಹದ ಗಳಿಕೆಗಾಗಿ

# ಇಸ್ತಿರ್ಜಾ

ಅಲ್ಲಾಹನ ತೀರ್ಪಿನೊಂದಿಗೆ ವಿಧೇಯತೆಯನ್ನು ಪ್ರಕಟಿಸುವ ವಚನಗಳ ಮೂಲಕ ಅವನ ಒಡೆತನವನ್ನು ಅಂಗೀಕರಿಸುತ್ತಾ ವ್ಯಕ್ತಪಡಿಸುವ ಮಾತನ್ನಾಡುವುದು. ಉದಾಹರಣೆಗೆ;

ವಿಪತ್ತುಗಳು ಮತ್ತು ಸಂಕಷ್ಟಗಳು ಭಾದಿಸಿದ ಸಂದರ್ಭದಲ್ಲಿ, "ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿವೂನ್" [ನಿಶ್ಚಯವಾಗಿಯೂ ನಾವು ಅಲ್ಲಾಹನ ಒಡೆತನದಲ್ಲಿರುವವರು. ಮತ್ತು ನಿಶ್ಚಯವಾಗಿಯೂ ನಾವು ಅವನ ಕಡೆಗೇ ಮರಳುವವರಿದ್ದೇವೆ.] ಎಂದು ಹೇಳುವುದು.

ಅಲ್ಲಾಹನು ಕುರ್‌ಆನ್‌ನಲ್ಲಿ ಹೇಳುತ್ತಾನೆ:

﴿ وَلَنَبْلُوَنَّكُم بِشَيْءٍ مِّنَ ٱلْخَوْفِ وَٱلْجُوعِ وَنَقْصٍ مِّنَ ٱلْأَمْوَٰلِ وَٱلْأَنفُسِ
وَٱلثَّمَرَٰتِۗ وَبَشِّرِ ٱلصَّٰبِرِينَ ﴿١٥٥﴾ ٱلَّذِينَ إِذَآ أَصَٰبَتْهُم مُّصِيبَةٌ
قَالُوٓاْ إِنَّا لِلَّهِ وَإِنَّآ إِلَيْهِ رَٰجِعُونَ ﴿١٥٦﴾ أُوْلَٰٓئِكَ عَلَيْهِمْ صَلَوَٰتٌ مِّن رَّبِّهِمْ وَرَحْمَةٌۖ
وَأُوْلَٰٓئِكَ هُمُ ٱلْمُهْتَدُونَ ﴿١٥٧﴾ ﴾

"ಶತ್ರುವಿನ ಭಯ, ಹಸಿವು, ದಾಹ, ಸೊತ್ತು, ಜೀವ ಹಾಗೂ ಸಂಪನ್ಮೂಲಗಳ ಅಭಾವ ಮುಂತಾಗಿ ಒಂದಲ್ಲ ಒಂದು ರೀತಿಯಲ್ಲಿ ನಾವು ನಿಮ್ಮನ್ನು ಖಂಡಿತವಾಗಿಯೂ ಪರೀಕ್ಷೆಗೊಳಪಡಿಸಲಿದ್ದೇವೆ. ಮತ್ತು ಆ ಸಹನಾಶೀಲರಿಗೆ (ಓ ಪ್ರವಾದಿಯವರೇ) ನೀವು ಶುಭವಾರ್ತೆಯನ್ನು ನೀಡಿರಿ. ಅವರ್‍ಯಾರೆಂದರೆ, ತಮಗೆ ಸಂಕಷ್ಟಗಳೊದಗಿದಾಗಲೆಲ್ಲಾ ಅವರು ಹೇಳುವರು, "ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿವೂನ್" [ನಿಶ್ಚಯವಾಗಿಯೂ ನಾವು ಅಲ್ಲಾಹನ ಒಡೆತನದಲ್ಲಿರುವವರು ಮತ್ತು ನಿಶ್ಚಯವಾಗಿಯೂ ನಾವು ಅವನ ಕಡೆಗೇ ಮರಳುವವರಾಗಿದ್ದೇವೆ.] ಅವರ ಮೇಲೆ ಅವರ ಪ್ರಭುವಿನ ಅಪಾರ ಕಾರುಣ್ಯ ಹಾಗೂ ಅನುಗ್ರಹಗಳಿರುವುವು ಮತ್ತು ಅವರು ಸನ್ಮಾರ್ಗವನ್ನು ಪಡೆದವರ ಪೈಕಿಯಲ್ಲಾಗಿರುವರು."
{ಸೂರ ಅಲ್-ಬಕರ: 155,156,157}

ನಾವೆಲ್ಲರೂ ಅಲ್ಲಾಹನತ್ತ ಮರಳುವವರಾಗಿದ್ದೇವೆ. ಮತ್ತು ಈ ಕಾರಣಕ್ಕಾಗಿಯೇ ಅಲ್ಲಾಹನ ವಿಧಿಯೊಂದಿಗೆ ಸಂಪೂರ್ಣ ತೃಪ್ತಿಯನ್ನು ಹೊಂದಿ ನಾವಿಲ್ಲಿ ಜೀವಿಸಬೇಕಾಗಿದೆ ಎಂದು ಸದಾಕಾಲ ಜ್ಞಾಪಕದಲ್ಲಿಟ್ಟುಕೊಳ್ಳುವುದೇ "ಇಸ್ತಿರ್ಜಾ".

ಉಮ್ಮು ಸಲಮ(ﷺ)ರವರು ಪ್ರವಾದಿ ಮುಹಮ್ಮದ್(ﷺ) ಈರೀತಿ ಹೇಳುವುದನ್ನು ಕೇಳಿರುವುದಾಗಿ ವರದಿ ಮಾಡಿದ್ದಾರೆ. "ಸಂಕಷ್ಟಗಳು ಭಾದಿಸಿದ ಸಂದರ್ಭದಲ್ಲೆಲ್ಲಾ ವಿಶ್ವಾಸಿಯೊಬ್ಬನು ಈರೀತಿ ಪ್ರಾರ್ಥಿಸಬೇಕು:

إِنَّا لِلَّهِ وَإِنَّا إِلَيْهِ رَاجِعُونَ اللَّهُمَّ أْجُرْنِي
فِي مُصِيْبَتِي وَاخْلُفْ لِي خَيْراً مِنْهَا.

'ನಿಶ್ಚಯವಾಗಿಯೂ ನಾವು ಅಲ್ಲಾಹನ ಒಡೆತನದಲ್ಲಿರುವವರು. ಮತ್ತು ನಿಶ್ಚಯವಾಗಿಯೂ ನಾವು ಅವನ ಕಡೆಗೇ ಮರಳುವವರಿದ್ದೇವೆ. ಓ ಅಲ್ಲಾಹನೇ! ನನಗೆ ಬಂದರೆರಗಿದ ವಿಪತ್ತುಗಳಿಗೆ ತಕ್ಕ ಪ್ರತಿಫಲವನ್ನು ನೀಡು, ಮತ್ತು ಪ್ರತಿಯಾಗಿ ಇದಕ್ಕಿಂತಲೂ ಉತ್ತಮವಾದುದನ್ನು ನೀಡು.'

ಈ ರೀತಿ ಹೇಳುವವನಿಗೆ (ಪ್ರಾರ್ಥಿಸುವವನಿಗೆ) ಅಲ್ಲಾಹು ಖಂಡಿತವಾಗಿಯೂ ತಕ್ಕ ಪ್ರತಿಫಲವನ್ನು ನೀಡುತ್ತಾನೆ, ಮತ್ತು ಉತ್ತಮವಾದುದನ್ನು ಬದಲಾಗಿ ನೀಡುತ್ತಾನೆ." ತದನಂತರ ಉಮ್ಮುಸಲಮ(ﷺ)ಹೇಳುತ್ತಾರೆ, " ಅಬೂ ಸಲಮ (ಉಮ್ಮುಸಲಮರವರ ಪತಿ) ತೀರಿಹೋದಾಗ ಅಲ್ಲಾಹನು ಈ ಮೇಲಿನ ಪ್ರಾರ್ಥನೆಯನ್ನು ಮಾಡುವ ಶಕ್ತಿಯನ್ನು ನನಗೆ ನೀಡಿದನು. ಮತ್ತು ಪ್ರತಿಯಾಗಿ ಅಲ್ಲಾಹನ ಪ್ರವಾದಿ(ﷺ)ಯವರನ್ನು ನನಗೆ ಪತಿಯಾಗಿ ನೀಡಿದನು."{ಸಹೀಹ್ ಮುಸ್ಲಿಮ್}

# ಶಕ್ವಾ

**"ಶಕ್ವಾ"** [ದೂರು] ಎಂಬುದು ಎರಡು ವಿಧಗಳಲ್ಲಿರುತ್ತದೆ.

**ಮೊದಲನೆಯದು ಅಲ್ಲಾಹನೊಂದಿಗೆ ಮೊರೆಯಿಡುವುದು. [ಫಿರ್ಯಾದು ಹೇಳುವುದು] ಇದು ತಾಳ್ಮೆಗೆ ವಿರುದ್ಧವಾದುದಲ್ಲ. ಅಲ್ಲಾಹನೊಂದಿಗೆ "ಶಕ್ವಾ"ಗೈಯುವ [ದೂರು ಹೇಳುವ] ಹಲವಾರು ಉದಾಹರಣೆಗಳನ್ನು ಕುರ್‌ಆನ್ ನಮ್ಮ ಮುಂದಿಡುತ್ತದೆ. ಅದರಲ್ಲಿ ಪ್ರವಾದಿ ಯಅಕೂಬ್(عليه السلام) ರವರು ಮಾಡುವ ಫಿರ್ಯಾದು ಕೂಡ ಒಂದು. ಅವರು ಹೇಳಿದರು:**

﴿ قَالَ إِنَّمَآ أَشْكُواْ بَثِّي وَحُزْنِيٓ إِلَى ٱللَّهِ
وَأَعْلَمُ مِنَ ٱللَّهِ مَا لَا تَعْلَمُونَ ﴿٨٦﴾ ﴾

**"...ನಾನಂತೂ ನನ್ನ ಸಂಕಟ ಹಾಗೂ ವ್ಯಥೆಯನ್ನು ತೋಡಿಕೊಳ್ಳುವುದು ಅಲ್ಲಾಹನಲ್ಲಿ ಮಾತ್ರವಾಗಿದೆ....."** {**ಸೂರ ಯೂಸುಫ್**: 86}

**ಎರಡನೆಯದು ಜನರ ಮುಂದೆ ತೋರ್ಪಡಿಸುವ ಅಥವಾ ಹೇಳಿಕೊಳ್ಳುವ ದೂರು. ನೇರವಾಗಿ ಅಥವಾ ಬೇರ್‍ಯಾವುದೇ ರೀತಿಯಲ್ಲಿ ಜನರ ಮುಂದೆ ಮಾತು ಅಥವಾ ಕೃತಿಯ [ವರ್ತನೆ ಹಾಗೂ ಭಂಗಿ] ಮೂಲಕ ತನ್ನ ಅಸಹಿಷ್ಣುತೆಯನ್ನು ತೋರ್ಪಡಿಸುವ ರೀತಿಯಲ್ಲಿರುವ ವರ್ತನೆಗಳು ಈ ಪೈಕಿಯಲ್ಲಿರುವುದಾಗಿದೆ. ಉದಾಹರಣೆಗೆ; ಸಂಕಷ್ಟಗಳ ವೇಳೆಗಳಲ್ಲಿ**

ಹರಿದುಹೋದ ಅಥವಾ ಚಿಂದಿಯಾದ ವಸ್ತ್ರವನ್ನುಟ್ಟುಕೊಳ್ಳುವುದು, ತಲೆಬೋಳಿಸಿಕೊಳ್ಳುವುದು, ತನ್ನ ಸಂಕಟ ಹಾಗೂ ದುರವಸ್ಥೆಯನ್ನು ಜನರೆಡೆಯಲ್ಲಿ ಪ್ರದರ್ಶಿಸುವುದು, ಇತ್ಯಾದಿ...

ಈ ರೀತಿ ತನ್ನ ನೋವು ಹಾಗೂ ಕೊರಗನ್ನು ಜನರು ತಿಳಿಯುವಂತೆ ಮಾಡುವ "ಶಕ್ವಾ" ಸಹನೆಗೆ [ಸಬ್ರ್‌ಗೆ] ವಿರುದ್ಧವಾಗಿದೆ. ಏಕೆಂದರೆ ಇದು ಅಲ್ಲಾಹನ ತೀರ್ಪಿನೊಂದಿಗಿರುವ ವಿರೋಧ ಮತ್ತು ಅಲ್ಲಾಹನಲ್ಲಿರುವ ವಿಶ್ವಾಸಕೊರತೆಯನ್ನು ಸೂಚಿಸುತ್ತದೆ.

ಹೇಗಿದ್ದರೂ, ಒಬ್ಬಾತ ತನ್ನ ವ್ಯಥೆಯನ್ನು ಅವನ ನಿಕಟ ಸ್ನೇಹಿತ ಹಾಗೂ ಸಂಬಂಧಿಯೊಬ್ಬರ ಸಮಕ್ಷ ಹಂಚಿಕೊಳ್ಳಬಹುದು. ಇಬ್ನು ಮಸ್‌ಊದ್(ﷺ)ರವರು ವರದಿ ಮಾಡಿರುತ್ತಾರೆ, "ಒಮ್ಮೆ ಪ್ರವಾದಿ(ﷺ)ಯವರು ರೋಗಪೀಡಿತರಾದ ಸಂದರ್ಭದಲ್ಲಿ ಅವರು [ಇಬ್ನು ಮಸ್‌ಊದ್(ﷺ)] ಪ್ರವಾದಿ(ﷺ)ಯವರನ್ನು ತನ್ನ ಕೈಗಳಿಂದ ಸ್ಪರ್ಶಿಸಿದಾಗ ಅತೀವ ಜ್ವರವಿರುವುದಾಗಿ ಅನುಭವಕ್ಕೆ ಬಂತು. ಅವರು ಹೇಳಿದರು, "ಪ್ರವಾದಿಯವರೇ(ﷺ) ತಮಗೆ ತೀವ್ರವಾಗಿ ಜ್ವರ ಬರುತ್ತಿರುವಂತಿದೆ, ಆಗ ಪ್ರವಾದಿ(ﷺ) ಉತ್ತರಿಸಿದರು, 'ಹೌದು ನಾನು ನಿಮ್ಮಲ್ಲಿಬ್ಬರಿಗೆ ಬರುವಷ್ಟು ತೀವ್ರ ರೀತಿಯಲ್ಲಿ ಜ್ವರದ ವ್ಯಸನವನ್ನು ಅನುಭವಿಸುತ್ತಿದ್ದೇನೆ." {ಮುತ್ತಫಕುನ್ ಅಲೈಹಿ}

# ಐಹಿಕ ಸಂಕಷ್ಟಗಳ ಮತ್ತೊಂದು ಮಗ್ಗಲು

ಈಗಾಗಲೇ ನಾವು ವಾಚಿಸಿದ ಪುಟಗಳನ್ನೊಮ್ಮೆ ಪರಿಶೀಲಿಸಿದಾಗ ಐಹಿಕ ಜೀವನದಲ್ಲಿ ಎದುರಾಗುವ ಕಷ್ಟಗಳು ಹಾಗೂ ವ್ಯಥೆಗಳು ವಿಶ್ವಾಸಿಯೊಬ್ಬನಿಗೆ ಒಂದು ಪರೀಕ್ಷೆಯಾಗಿದೆಯೆಂದೂ, ಇಂತಹ ಸಂದರ್ಭಗಳಲ್ಲಿ ವಿಶ್ವಾಸಿಯೊಬ್ಬ ಸಹನಶೀಲನಾಗಿ ಅಲ್ಲಾಹನ ವಿಧಿಗೆ ಬದ್ಧನಾಗಿರಬೇಕೆಂದೂ ಅರಿತುಕೊಂಡೆವು. ಆದರೆ ಹಲವು ಬಾರಿ ವಿಶ್ವಾಸಿಗಳು ಎದುರಿಸಬೇಕಾಗಿ ಬರುವಂತಹ ಸಂಕಟ ಹಾಗೂ ವ್ಯಸನಗಳು ಅವರ ಪಾಪ ಹಾಗೂ ದುಷ್ಕೃತ್ಯಗಳ ಫಲಿತಾಂಶದಿಂದಾಗಿರುತ್ತದೆ. ಮತ್ತು ಅಲ್ಲಾಹನ ಕಡೆಯಿಂದ ಇದೊಂದು ಶಿಕ್ಷೆಯಾಗಿದೆ. ಆದುದರಿಂದ ಪಾಪಕೃತ್ಯಗಳನ್ನು ವರ್ಜಿಸಿ ಅಲ್ಲಾಹನತ್ತ ಪಶ್ಚಾತ್ತಾಪದೊಂದಿಗೆ ಮರಳಬೇಕಾಗಿದೆ ಎಂದು ಕುರ್ಆನ್ ನಮ್ಮನ್ನು ಹೀಗೆ ಎಚ್ಚರಿಸುತ್ತದೆ;

"ನಿಮಗೆ ಯಾವುದೇ ಆಪತ್ತು ಭಾದಿಸಿದರೂ ಅದು ನಿಮ್ಮ ಕೈಗಳು ಮಾಡಿದ ಕೃತ್ಯದ ಫಲವಾಗಿದೆ......."{ಸೂರ ಅಶ್ಶೂರಾ:30}

ಐಹಿಕ ಸಂಕಷ್ಟಗಳ ಈ ಮಗ್ಗಲನ್ನು ಕೂಡ ಚೆನ್ನಾಗಿ ಅರ್ಥೈಸಿಕೊಂಡು ಯುಕ್ತ ಪರಿಗಣನೆಯೊಂದಿಗೆ ಇದನ್ನು ಸಮೀಪಿಸುವುದು ಅನಿವಾರ್ಯವಾಗಿದೆ. ಅಲ್ಲಾಹನ ಎಚ್ಚರಿಕೆ ಹಾಗೂ ಬುದ್ಧಿವಾದಗಳತ್ತ ಗಮನ ನೀಡದೆ ನಿರ್ಲಕ್ಷ್ಯ ತೋರಿದ ಕಾರಣದಿಂದಾಗಿ ಕಠೋರವಾಗಿ ಶಿಕ್ಷಿಸಲ್ಪಟ್ಟು, ತರುವಾಯ

ಸಂಪೂರ್ಣವಾಗಿ ನಿರ್ನಾಮಗೊಳಿಸಲ್ಪಟ್ಟ ಗತ ಸಮುದಾಯಗಳ ದುರ್ಗತಿಯ ಬಗ್ಗೆ ಕುರ್‌ಆನ್ ಸಾಕ್ಷ್ಯ ನುಡಿಯುತ್ತದೆ. ಪ್ರವಾದಿ ನೂಹ್ (عليه السلام) ರವರ ಕಾಲದಲ್ಲಿ ಘೋರ ಜಲಪ್ರಳಯದ ಮೂಲಕ ಅವಿಶ್ವಾಸಿಗಳನ್ನು ಅಲ್ಲಾಹು ಶಿಕ್ಷಿಸಿದ್ದನು. ಪ್ರವಾದಿ ಹೂದ್ (عليه السلام)ರವರ ಸಮುದಾಯವನ್ನು ಅಲ್ಲಾಹನು ದಂಡಿಸಲು ತೀರ್ಮಾನಿಸಿ ಭಯಾನಕ ಬಿರುಗಾಳಿಯೊಂದನ್ನು ಅವರತ್ತ ಕಳುಹಿಸಿದ್ದನು. ವಿಪತ್ಕಾರಕವಾದ ಭೂಕಂಪವೊಂದು ಪ್ರವಾದಿ ಸ್ವಾಲಿಹ್(عليه السلام)ರವರ ಸಮುದಾಯದಲ್ಲಿದ್ದ ಅಹಂಕಾರಿಗಳನ್ನು ಸರ್ವನಾಶಗೈದಿತ್ತು. ಪ್ರವಾದಿ ಲೂತ್ (عليه السلام) ರವರ ಸಮುದಾಯದ ಮೇಲೆ ಅಲ್ಲಾಹನು [ಬೇಯಿಸಿದ ಮಣ್ಣಿನಿಂದ ಮಾಡಲ್ಪಟ್ಟ] ಕಲ್ಲುಗಳ ಮಳೆ ವರ್ಷಿಸಿದ ನಂತರ ಅವರನ್ನು [ಭೂಮಿ] ಬುಡಮೇಲಾಗಿಸಿ ಶಿಕ್ಷಿಸಿದ್ದನು. ಈರೀತಿ ಅಲ್ಲಾಹನ ಆಜ್ಞೆಯನ್ನು ಪಾಲಿಸದೆ ಅವಿಧೇಯತೆಯನ್ನು ತೋರಿ ಅವನ ಬೋಧನೆಯನ್ನು ಅನಾದರಿಸಿದರುಂಟಾಗುವ ಕೆಟ್ಟ ಪರಿಣಾಮಗಳ ಕುರಿತು ಗತ ಸಮುದಾಯಗಳ ಹಲವಾರು ಚರಿತ್ರೆಗಳು ನಮ್ಮನ್ನು ಎಚ್ಚರಿಸುತ್ತವೆ. ಅಲ್ಲಾಹನು ಕುರ್‌ಆನಿನಲ್ಲಿ ಈರೀತಿ ಎಚ್ಚರಿಸುತ್ತಾನೆ:

﴿ فَلْيَحْذَرِ ٱلَّذِينَ يُخَالِفُونَ عَنْ أَمْرِهِۦٓ
أَن تُصِيبَهُمْ فِتْنَةٌ أَوْ يُصِيبَهُمْ عَذَابٌ أَلِيمٌ ﴿٦٣﴾ ﴾

"ತಿಳಿದುಕೊಳ್ಳಿರಿ, ಯಾರು ಪ್ರವಾದಿಯ ಆದೇಶವನ್ನು ಧಿಕ್ಕರಿಸುತ್ತಾರೋ ಅವರು ತಮಗೆ ವಿಪತ್ತು ಅಥವಾ ವೇದನಾಯುಕ್ತ ಶಿಕ್ಷೆಯು ಬಂದೆರಗಬಹುದೆಂದು ಭಯಪಡಲಿ." {ಸೂರ ಅನ್ನೂರ್: 63}

ಅಲ್ಲಾಹನ ಕಡೆಯಿಂದ ವಿವಿಧ ಸ್ವರೂಪಗಳಲ್ಲಿ ಶಿಕ್ಷೆಗಳೆರಗುವ ಸಾಧ್ಯತೆಗಳಿವೆ. ಪ್ರಾಯಶಃ ಇಂದಿನ ಕಾಲದಲ್ಲಿ ಮಾನವ ರಾಶಿಯ ಮೇಲೆರಗಿದ ಸ್ಪಷ್ಟವಾದ ಶಿಕ್ಷೆಯೆಂದು ನಮಗೆ ಭಾಸವಾಗುವುದೆಂದರೆ "ಏಡ್ಸ್" [AIDS] ಎಂಬ ಮಾರಕ ರೋಗ. 80ರ ದಶಕದಲ್ಲಿ ಪ್ರಥಮ ಬಾರಿಗೆ ಈ ರೋಗ ಕಾಣಿಸಿಕೊಂಡಿತ್ತು. ಈ ಮಾರಕ ವ್ಯಾಧಿಯಿಂದಾಗಿ ನಮ್ಮ ಶರೀರದಲ್ಲಿರುವ ಪ್ರತಿರೋಧ ಶಕ್ತಿಯು [ರೋಗ ನಿರೋಧಕ ಶಕ್ತಿ] ಕ್ಷೀಣಿಸುವುದರಿಂದ ಯಾವುದೇ ರೀತಿಯ ಸೋಂಕನ್ನು ತಡೆಗಟ್ಟುವಲ್ಲಿ ಶರೀರ

ಅಸಮರ್ಥವಾಗಿಬಿಡುತ್ತದೆ. ಏಡ್ಸ್ ರೋಗವನ್ನು ತಗುಲಿಸಿಕೊಂಡ ಯಾವುದೇ ವ್ಯಕ್ತಿ ಕೆಲವೇ ವರ್ಷಗಳಲ್ಲಿ ಮರಣ ಹೊಂದುತ್ತಾನೆ(ಳೆ). ಏಡ್ಸ್ ಹಬ್ಬುವ ಮುಖ್ಯ ಕಾರಣಗಳೇನೆಂದರೆ ಅನೈತಿಕ (ಅಧಾರ್ಮಿಕ) ಲೈಂಗಿಕ ಚಟುವಟಿಕೆಗಳು, ಸಲಿಂಗಕಾಮ ಮತ್ತು ಅಮಿತ ಮಾದಕ ಪದಾರ್ಥ ಸೇವನೆ. ಈ ಎಲ್ಲಾ ಕೃತ್ಯಗಳು ಅಲ್ಲಾಹನು ನಿಶ್ಚಯಿಸಿದ ಮಿತಿಗಳ ಉಲ್ಲಂಘನೆಗಳಾಗಿವೆ.

ಕೆಲವರು ಏಡ್ಸ್ ಎಂಬ ರೋಗ ಕೇವಲ ಪಾಪಿಗಳಿಗೆ ಮಾತ್ರ ಸೀಮಿತಗೊಂಡಿಲ್ಲ, ಗುಣಶೀಲರಾದ ಉತ್ತಮ ವ್ಯಕ್ತಿಗಳ ನಡುವೆಯೂ ಇದು ಹಬ್ಬಿದೆ ಎಂದು ಕೆಲವರು ವಾದಿಸಬಹುದು. ಕುರ್‌ಆನ್ ಈ ಪ್ರಶ್ನೆಗಳಿಗೆ ಈರೀತಿ ಉತ್ತರಿಸುತ್ತದೆ:

﴿ وَٱتَّقُوا۟ فِتْنَةً لَّا تُصِيبَنَّ ٱلَّذِينَ ظَلَمُوا۟ مِنكُمْ خَآصَّةً ۖ وَٱعْلَمُوٓا۟ أَنَّ ٱللَّهَ شَدِيدُ ٱلْعِقَابِ ﴿٢٥﴾ ﴾

"ನಿಮ್ಮಲ್ಲಿನ ಅಕ್ರಮಿಗಳಿಗೆ ಮಾತ್ರ ಸೀಮಿತಗೊಳ್ಳದಂತಹ ವಿಪತ್ತುಗಳ ಬಗ್ಗೆ ನೀವು ಜಾಗರೂಕರಾಗಿರಿ, ಅಲ್ಲಾಹನು ಕಠಿಣವಾಗಿ ಶಿಕ್ಷಿಸುವವನಾಗಿದ್ದಾನೆ."

{**ಸೂರ ಅನ್‌ಫಾಲ್**: 25}

ಇದರರ್ಥ ಇಹಲೋಕದಲ್ಲಿ ಮನುಷ್ಯರ ಮೇಲೆರಗುವ ಅಲ್ಲಾಹನ ಶಿಕ್ಷೆಯು ಕೇವಲ ಪಾಪಿಗಳನ್ನು ಮಾತ್ರ ಆವರಿಸಿಕೊಳ್ಳುವುದಿಲ್ಲ. ಬದಲಾಗಿ ಅವರೊಂದಿಗೆ ಸಂಪೂರ್ಣ ಸಮಾಜವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ.

ಮನುಷ್ಯರನ್ನು ಬಾಧಿಸುವ ಹಲವು ವಿಪತ್ತುಗಳು ಹಾಗೂ ದುರಂತಗಳ ಸರಮಾಲೆಗಳ ಪೈಕಿ "ಏಡ್ಸ್" ಕೂಡ ಒಂದು ಎಂದು ಮಾತ್ರ. ಇಂದು ಹಲವಾರು ಮಾರಕರೋಗಗಳು, ಅನಿರೀಕ್ಷಿತ ಬಿರುಗಾಳಿ, ಚಂಡಮಾರುತಗಳು, ನೆರೆ, ಬರ, ಸುನಾಮಿ, ಭೂಕಂಪಗಳು ವಿಶ್ವದ ನಾನಾ ಕಡೆಗಳಲ್ಲಿ ದುರಂತದ ರೂಪದಲ್ಲಿ ಸಮಾಜದ ಮೇಲೆರಗುತ್ತಿರುವುದರ ಬಗ್ಗೆ ನಾವು ದಿನನಿತ್ಯ ಕೇಳುತ್ತಲೇ ಇದ್ದೇವೆ. ನಮ್ಮನ್ನು ಉದ್ಬೋಧಿಸುವ (ಎಚ್ಚರಿಸುವ) ಸಲುವಾಗಿ ಶಿಕ್ಷೆಯು ಶತ್ರುಗಳ ಆಕ್ರಮಣ, ದಬ್ಬಾಳಿಕೆಗಳ

ರೂಪದಲ್ಲೂ ಇಂದು ಬರುತ್ತಿವೆ. ಅಲ್ಲಾಹನೊಂದಿಗೆ ತೋರಿದ ಅವಿಧೇಯತೆಯ ಫಲಿತಾಂಶವೆಂಬಂತೆ ಸಂಕಷ್ಟಗಳು ಹಾಗೂ ವಿಪತ್ತುಗಳಿಂದ ನಾವು ಸುತ್ತುವರಿಯಲ್ಪಟ್ಟಿದ್ದೇವೆ.

ಅಲ್ಲಾಹನ ನಿಯಮಗಳನ್ನು ಉಲ್ಲಂಘಿಸುವ ಗೊಡವೆಗೆ ಹೋಗದೆ ಪ್ರತಿಯೊಬ್ಬರೂ ಇಸ್ಲಾಮಿನ ಸೀಮೆಯೊಳಗೆ ತನ್ನನ್ನು ತಾನು ನಿಯಂತ್ರಿಸಿಕೊಳ್ಳುವುದೇ ಏಕೈಕ ಪರಿಹಾರವಾಗಿದೆಯೆಂದು ನಾವು ಅರಿಯಲಿಕ್ಕಾಗಿ ಅಲ್ಲಾಹನು ಕುರ್‌ಆನ್‌ನಲ್ಲಿ ಈ ರೀತಿ ನಮ್ಮನ್ನು ಎಚ್ಚರಿಸುತ್ತಾನೆ:

﴿ ظَهَرَ ٱلْفَسَادُ فِى ٱلْبَرِّ وَٱلْبَحْرِ بِمَا كَسَبَتْ أَيْدِى ٱلنَّاسِ
لِيُذِيقَهُم بَعْضَ ٱلَّذِى عَمِلُوا۟ لَعَلَّهُمْ يَرْجِعُونَ ﴿٤١﴾ ﴾

"ನೆಲದಲ್ಲೂ, ಜಲದಲ್ಲೂ ಜನರ ದುಷ್ಕೃತ್ಯಗಳ ನಿಮಿತ್ತ ಕ್ಷೋಭೆ ಹರಡಿದೆ. ಇದು ಯಾಕೆಂದರೆ,(ಅಲ್ಲಾಹನು) ಅವರಿಗೆ ಅವರ ಕೆಲವು ಕೃತ್ಯಗಳ ಫಲದ ಸವಿಯುಣಿಸಲೆಂದಾಗಿದೆ. ಇದರಿಂದ ಅವರು ಮರಳಬರುವ ಸಾಧ್ಯತೆಯೂ ಅಧಿಕವಿದೆ." {ಸೂರ ಅರ್ರೂಮ್: 41}

ನಮ್ಮ ಅಳಿವಿಗೆ ಹೇತುವಾಗುವ ಎಲ್ಲಾರೀತಿಯ ದುಷ್ಕೃತ್ಯಗಳಿಂದ ನಿರ್ಗಮಿಸಿ ಆತುರಾತುರವಾಗಿ ಪಶ್ಚಾತ್ತಾಪದತ್ತ ಸಾಗುವಂತಾಗಲು ಕುರ್‌ಆನ್ ಈ ಮೇಲೆ ನೀಡಿದ ಎಚ್ಚರಿಕೆಯನ್ನು ಗಂಭೀರವಾಗಿ ನಾವು ಪರ್ಯಾಲೋಚಿಸಬೇಕು. ತಪ್ಪಿಸಿಕೊಳ್ಳಲು ಸಾಧ್ಯವಿಲ್ಲದಂತಹ ರೀತಿಯಲ್ಲಿ ಮಹಾದುರಂತವೊಂದು ನಮ್ಮನ್ನು ಆವರಿಸಿಕೊಳ್ಳುವ ಮುಂಚೆ ಅಲ್ಲಾಹನ ಭಯಾನಕ ಶಿಕ್ಷೆಯಿಂದ ಪಾರಾಗಿ ಅವನ ಪ್ರೀತಿಯನ್ನು ಪಡೆಯುವ ನಿಟ್ಟಿನಲ್ಲಿ ಮತ್ತು ಈ ಜಗತ್ತಿನಲ್ಲಿ ಒಳಿತನ್ನು ಸಂಸ್ಥಾಪಿಸಲು ಕಾಲಮೀರದೆ ಆದಷ್ಟು ಶೀಘ್ರಗತಿಯಲ್ಲಿ ನಾವು ಶ್ರಮಿಸಬೇಕಾಗಿದೆ.

## ಸಂಕಷ್ಟಗಳ ವೇಳೆಗಳಲ್ಲಿ

# ಪ್ರಾರ್ಥನೆ ಅಲ್ಲಾಹು ಒಬ್ಬನೊಂದಿಗೆ ಮಾತ್ರ

ಸಂಕಷ್ಟ ಹಾಗೂ ಯಾತನೆಗಳು ಭಾದಿಸಿದಾಗ ಸಮಾಧಿಕೇಂದ್ರಗಳು ಹಾಗೂ ಗೋರಿಗಳತ್ತ ಸಹಾಯ ಮತ್ತು ದುಃಖ ಪರಿಹಾರಾರ್ಥ ಧಾವಿಸುವವರು ಎಷ್ಟೊಂದು ದುರದೃಷ್ಟಶಾಲಿಗಳು. ಪ್ರವಾದಿಗಳು ಮತ್ತು ಮೃತ ಮಹಾತ್ಮರೊಂದಿಗೆ ಕಷ್ಟಗಳನ್ನು ಚದುರಿಸಲು ಪ್ರಾರ್ಥಿಸುವವರಾಗಿ ಇವರು ಕಾಣಸಿಗುತ್ತಾರೆ. ಇಂತವರ ಕುರಿತು ಅಲ್ಲಾಹನು ಕುರ್‌ಆನ್‌ನಲ್ಲಿ ಹೇಳುತ್ತಾನೆ:

﴿ وَمَنۡ أَضَلُّ مِمَّن يَدۡعُواْ مِن دُونِ ٱللَّهِ مَن لَّا يَسۡتَجِيبُ لَهُۥٓ إِلَىٰ يَوۡمِ ٱلۡقِيَٰمَةِ
وَهُمۡ عَن دُعَآئِهِمۡ غَٰفِلُونَ ٥ ﴾

"ಕಿಯಾಮತ್ (ಅಂತಿಮ) ದಿನದವರೆಗೂ ತನ್ನ ಪ್ರಾರ್ಥನೆಗೆ ಉತ್ತರಿಸಲಾಗದವರನ್ನು, ಜನರ ಕರೆಯ ಬಗ್ಗೆ ಅಲಕ್ಷ್ಯರಾಗಿರುವವರನ್ನೂ ಕರೆದು ಪ್ರಾರ್ಥಿಸುವವನಿಗಿಂತ ಅತ್ಯಂತ ಪಥಭ್ರಷ್ಟ ಇನ್ನಾರಿರಬಹುದು."{ಸೂರ ಅಲ್-ಅಹ್‌ಕಾಫ್: 5}

ಇವರು ಮಾಡುವ ಈ ಕೃತ್ಯ (ಅಲ್ಲಾಹೇತರರೊಂದಿಗೆ ಮಾಡುವ ಪ್ರಾರ್ಥನೆ) ಎಷ್ಟೊಂದು ನಿಷ್ಪ್ರಯೋಜಕವೆಂದು ಸಾಬೀತುಪಡಿಸಲು ಪ್ರವಾದಿ (ﷺ)ಯವರ ಈ ನುಡಿಮುತ್ತೊಂದು ಧಾರಾಳವಾಗಿ ಸಾಕು. ಪ್ರವಾದಿ (ﷺ) ಹೇಳಿದರು, "ಜನರ ಪೈಕಿ ಅತ್ಯಂತ ಕಠಿಣವಾಗಿ ಪರೀಕ್ಷಿಸಲ್ಪಟ್ಟವರು ಪ್ರವಾದಿಗಳು. ನಂತರ

ಮಾದರಿ ಪುರುಷರು, ಅನಂತರ ಉತ್ತಮ ಜನರು. ಒಬ್ಬ ವ್ಯಕ್ತಿಯು ಅವನಲ್ಲಿರುವ ದೀನ್(ಧಾರ್ಮಿಕತೆ)ಗನುಸಾರವಾಗಿ ಪರೀಕ್ಷಿಸಲ್ಪಡುವನು. ಅವನಲ್ಲಿ ದೀನ್ ದುರ್ಬಲವಾಗಿದ್ದರೆ ಅದೇ ಪ್ರಕಾರ ಪರೀಕ್ಷಿಸಲಾಗುತ್ತದೆ. ಇನ್ನು ಅವನಲ್ಲಿ ದೀನ್ ಸುದೃಢವಾಗಿದ್ದರೆ ಅದರಂತೆಯೇ ಅವನನ್ನು ಪರೀಕ್ಷಿಸಲಾಗುತ್ತದೆ." ಅವರು (ﷺ) ಹೇಳಿದರು, "ಒಬ್ಬ ವ್ಯಕ್ತಿಯಲ್ಲಿ ಇಂತಹಾ ಪರೀಕ್ಷೆಗಳು ನಡೆಯುತ್ತಲೇ ಇರುತ್ತವೆ. ಎಲ್ಲಿಯವರೆಗೆಂದರೆ, ಯಾವುದೇ ಪಾಪಭಾರವಿಲ್ಲದ ಸ್ಥಿತಿಯಲ್ಲಿ ಅವನು ಭೂಮಿಯ ಮೇಲೆ ನಡೆದುಹೋಗುವನು." {ಸಹೀಹ್ ಅಲ್–ಜಾಮಿಈ: 993}

ಪ್ರವಾದಿಗಳು, ಅವರ ಅನುಚರರು ಮತ್ತು ಅವರ ನಂತರದ ಉತ್ತಮರಾದ ಸಾತ್ವಿಕರು ಅಲ್ಲಾಹನಿಂದ ಅತ್ಯಧಿಕ ಪರೀಕ್ಷೆಗೊಳಪಟ್ಟವರಾಗಿದ್ದಾರೆ ಎಂದು ಸೂಚಿಸುವ ಈ ಮೇಲಿನ ಹದೀಸ್, ತೌಹೀದ್ (ಅಲ್ಲಾಹನ ಏಕತ್ವ)ಗಿರುವ ಒಂದು ಸಾಕ್ಷ್ಯವಾಗಿದೆ. ಪ್ರವಾದಿಗಳು ಮತ್ತು ಸಾತ್ವಿಕರಾದ ವ್ಯಕ್ತಿಗಳು ಕೂಡ ವಿಪತ್ತುಗಳನ್ನು ಅಭಿಮುಖೀಕರಿಸಿದವರಾಗಿದ್ದರು. ಸಾಧಾರಣ ವಿಶ್ವಾಸಿಗಳು ಅನುಭವಿಸುವುದಕ್ಕಿಂತಲೂ ಹೆಚ್ಚಿನ ಕಷ್ಟಗಳನ್ನು ಅವರು ಅನುಭವಿಸಿದ್ದವರಾಗಿದ್ದರೆಂದೂ, ಅಲ್ಲಾಹನಲ್ಲದೆ ಬೇರೆ ಯಾರೂ ಅವರ ಸಂಕಷ್ಟಗಳನ್ನು ನಿವಾರಿಸಬಲ್ಲವರಿರಲಿಲ್ಲವೆಂದೂ ಒಬ್ಬನು ಈ ಮೂಲಕ ಅರಿತುಕೊಂಡರೆ ಆಮೇಲೆ ಅವನು ಮಹಾನ್ ವ್ಯಕ್ತಿಗಳು ಸ್ವಯಂ ಒಳಿತನ್ನು ಪಡೆಯಲು ಮತ್ತು ಹಾನಿಯನ್ನು ತಡೆಯಲು ಸಾಧ್ಯವಿಲ್ಲದಿರವಾಗ ಬಾಕಿ ಜನರನ್ನು ಕೇಡಿನಿಂದ ಕಾಪಾಡುವುದು ಹೇಗೆ ಸಾಧ್ಯ ಎಂದು ಖಂಡಿತವಾಗಿಯೂ ಅರಿತುಕೊಳ್ಳುತ್ತಾನೆ. ಆದುದರಿಂದ ದುಃಖ ಶಮನಕ್ಕಾಗಿ ಪ್ರವಾದಿಗಳು ಮತ್ತು ಅವುಲಿಯಾಗಳತ್ತ (ಸಾತ್ವಿಕರತ್ತ) ತಿರುಗುವುದು ವ್ಯರ್ಥ ಮತ್ತು ಆಶಾರಹಿತವಾಗಿದೆ. ನಿಜವಾಗಿಯೂ ಒಬ್ಬನು ಮಾಡಬೇಕೆನೆಂದರೆ ಅವನ ಪ್ರಾರ್ಥನೆಯನ್ನು ಅಲ್ಲಾಹನತ್ತ ತಿರುಗಿಸಬೇಕಾಗಿದೆ. ಏಕೆಂದರೆ ಎಲ್ಲಾರೀತಿಯ ಹಾನಿಯನ್ನು ಅಲ್ಲಾಹನು ಮಾತ್ರ ತಡೆಗಟ್ಟಬಲ್ಲವನಾಗಿದ್ದಾನೆ.

ಅಲ್ಲಾಹನು ಪ್ರವಾದಿ ಅಯ್ಯೂಬ್(عليه السلام)ರವರ ವೃತ್ತಾಂತವನ್ನು ಉಲ್ಲೇಖಿಸುತ್ತಾನೆ. ಅವರಿಗೆ ನೀಡಲ್ಪಟ್ಟ ಸಂಪತ್ತು, ಸಂತಾನ,

ಸಾಮರ್ಥ್ಯ(ದೈಹಿಕ ಆರೋಗ್ಯ)ದ ಮೂಲಕ ಅವರು ಪರೀಕ್ಷಿಸಲ್ಪಟ್ಟರು. ಅವರು ಹೇರಳವಾದ ಸಾಕುಪ್ರಾಣಿಗಳು, [ದನಕರುಗಳು, ಆಡು, ಒಂಟೆ ಮುಂತಾದ] ಸಮೃದ್ಧ ಪೈರು ಫಸಲುಗಳು, ಹಲವು ಮಕ್ಕಳು ಮತ್ತು ಉತ್ತಮವಾದ ಭವನಗಳನ್ನು ಹೊಂದಿದ್ದರು. ಅವರ ಒಡೆತನದಲ್ಲಿದ್ದ ಇವುಗಳೆಲ್ಲವನ್ನೂ ಕಳೆದುಕೊಳ್ಳುವುದರ ಮೂಲಕ ಅವರು ಪರೀಕ್ಷಿಸಲ್ಪಟ್ಟರು. ಶರೀರ(ಆರೋಗ್ಯ)ದ ಮೂಲಕ ಅವರು ಪರೀಕ್ಷಿಸಲ್ಪಟ್ಟರು. ಮತ್ತು ಒಬ್ಬಂಟಿಗನಾಗಿ ಊರಿನ ಮೂಲೆಯೊಂದಕ್ಕೆ ತಳ್ಳಲ್ಪಟ್ಟರು. ಅವರ ಪತ್ನಿಯೊಬ್ಬರನ್ನು ಬಿಟ್ಟರೆ ಅವರತ್ತ ಕಣ್ಣೆತ್ತಿ ನೋಡುವವರ್‍ಯಾರೂ ಅಲ್ಲಿರಲಿಲ್ಲ. ಆದರೆ ಪ್ರವಾದಿ ಅಯ್ಯೂಬ್(عليه السلام)ರವರು ಅತೀವ ಸಹಿಷ್ಣುತೆ ಮತ್ತು ಅಲ್ಲಾಹನಲ್ಲಿ ಅಪಾರ ಭರವಸೆಯನ್ನು ಹೊಂದಿದ್ದರು. ಮತ್ತು ಸಹಾಯಕ್ಕಾಗಿ ಅವರು ಕೇವಲ ಅಲ್ಲಾಹನಲ್ಲಿ ಮಾತ್ರ ಪ್ರಾರ್ಥಿಸಿದ್ದರು:

﴿ وَأَيُّوبَ إِذْ نَادَىٰ رَبَّهُۥٓ أَنِّى مَسَّنِىَ ٱلضُّرُّ وَأَنتَ أَرْحَمُ ٱلرَّٰحِمِينَ ﴾

“ಅಯ್ಯೂಬ್ ತನ್ನ ಪಾಲಕಪ್ರಭುವನ್ನು ಕರೆದ ಸಂದರ್ಭ(ವನ್ನು ಸ್ಮರಿಸು); ನನಗೆ ಈ ಕಾಯಿಲೆಯು ಭಾದಿಸಿದೆ. ನೀನು ಕಾರುಣ್ಯವಂತರಲ್ಲಿ ಅತ್ಯಧಿಕ ಕಾರುಣ್ಯವುಳ್ಳವನಾಗಿರುವೆ.” {ಸೂರ ಅಲ್ ಅಂಬಿಯಾ: 83}

ನಂತರ ಅಲ್ಲಾಹು ಹೇಳುತ್ತಾನೆ:

﴿ فَٱسْتَجَبْنَا لَهُۥ فَكَشَفْنَا مَا بِهِۦ مِن ضُرٍّ ۖ
وَءَاتَيْنَٰهُ أَهْلَهُۥ وَمِثْلَهُم مَّعَهُمْ رَحْمَةً مِّنْ عِندِنَا وَذِكْرَىٰ لِلْعَٰبِدِينَ ﴿٨٤﴾ ﴾

“ ಆಗ ನಾವು ಅವರ(ಅಯ್ಯೂಬರ) ಕರೆಗೆ ಓಗೊಟ್ಟೆವು, ಮತ್ತು ಅವರಿಗಿದ್ದಂತಹ ಸಂಕಷ್ಟವನ್ನು ದೂರೀಕರಿಸಿದೆವು ಮತ್ತು ಅವರಿಗೆ ಕುಟುಂಬಿಕರನ್ನು ದಯಪಾಲಿಸಿದೆವು. ಮಾತ್ರವಲ್ಲ ನಮ್ಮ ವಿಶೇಷ ಕೃಪೆಯಿಂದ ಅದರಷ್ಟನ್ನೇ ಹೆಚ್ಚಿಗೆ ನೀಡಿದೆವು, ಇದು ನೈಜ ದಾಸರಿಗೊಂದು ಉದ್ಬೋದನೆಯಾಗಲೆಂದಾಗಿದೆ.” {ಸೂರ ಅಲ್ ಅಂಬಿಯಾ: 84}

ಕುರ್‌ಆನ್ ಸ್ಪಷ್ಟವಾಗಿ ವಿವರಿಸುವ ವಿಷಯವೇನೆಂದರೆ ಮೃತರು ಜೀವಿಸುತ್ತಿರುವವರನ್ನು ಸಹಾಯಿಸಲಾರರೆಂದಾಗಿದೆ. ಆದುದರಿಂದ ಮೃತರೊಂದಿಗೆ ಸಹಾಯ ಯಾಚಿಸುವವರು ಖಂಡಿತವಾಗಿಯೂ ನಷ್ಟದಲ್ಲಿರುವರು. ಅದೂ ಅಲ್ಲದೆ ಅಲ್ಲಾಹನೊಂದಿಗಿರುವ ಪ್ರಾರ್ಥನೆಯಲ್ಲಿ ಅಲ್ಲಾಹೇತರರನ್ನು ಕರೆದು ಪ್ರಾರ್ಥಿಸುವುದು (ಅಲ್ಲಾಹನೊಂದಿಗೆ ಸಹಭಾಗಿಗಳನ್ನಾಗಿಸುವುದು) ಮಹಾಅಕ್ರಮವಾಗಿದೆ. ಯಾಕೆಂದರೆ, ಪ್ರಾರ್ಥನೆ (ದುಆ) ಆರಾಧನೆಯಾಗಿದೆ. ಆರಾಧಿಸಲ್ಪಡುವ ಹಕ್ಕು ಅಲ್ಲಾಹನಿಗೆ ಮಾತ್ರವಿರುವುದಾಗಿದೆ. ಅಲ್ಲಾಹನು ಕುರ್‌ಆನ್‌ನಲ್ಲಿ ಹೇಳುತ್ತಾನೆ:

"ಮತ್ತು ನಿಮ್ಮ ಪಾಲಕ ಪ್ರಭುವಿನ ಆದೇಶವು (ದೃಢಪಟ್ಟಿರುತ್ತದೆ) ಏನೆಂದರೆ, 'ನೀವು ನನ್ನೊಂದಿಗೆ ಪ್ರಾರ್ಥಿಸಿರಿ, ನಾನು ನಿಮ್ಮ ಪ್ರಾರ್ಥನೆಗಳಿಗೆ ಉತ್ತರ ನೀಡುತ್ತೇನೆ. ಯಾರು ನನ್ನ ಇಬಾದತ್‌ನಿಂದ ಧಿಕ್ಕಾರ ತೋರುತ್ತಾರೋ ಅವರು ಸದ್ಯದಲ್ಲೇ ಅಪಮಾನಿತರಾಗಿ ನರಕಾಗ್ನಿಯನ್ನು ಪ್ರವೇಶಿಸಲಿದ್ದಾರೆ." {ಸೂರ ಗಾಫಿರ್: 60}

ಈ ಸೂಕ್ತವನ್ನು ವ್ಯಾಖ್ಯಾನಿಸುತ್ತಾ ಅಲ್ಲಾಹನ ಸಂದೇಶವಾಹಕರಾದ ಪ್ರವಾದಿ ಮುಹಮ್ಮದ್(ﷺ) ಹೇಳಿದರು, "ಪ್ರಾರ್ಥನೆಯು ಆರಾಧನೆಯಾಗಿದೆ" {ಸುನನ್ ಅಬೂದಾವೂದ್ 1474}

ದಾಸನೊಬ್ಬನು ಅಲ್ಲಾಹನೊಂದಿಗಿರುವ ಹಕ್ಕನ್ನು ಸಂರಕ್ಷಿಸುತ್ತಾ (ಭಾದ್ಯತೆಗಳನ್ನು ಪಾಲಿಸುತ್ತಾ) ಅವನನ್ನು ಮಾತ್ರ ಆರಾಧಿಸಿದರೆ ಅಲ್ಲಾಹನು ಆತನನ್ನು ಶಿಕ್ಷೆಗಳಿಂದ ರಕ್ಷಿಸುವ ಮತ್ತು ಆತನ ಪಾಪಗಳನ್ನು ಮನ್ನಿಸುವ ವಾಗ್ದಾನವಿತ್ತಿದ್ದಾನೆಂದು ನಾವು ಈ ಕೆಳಗಿನ ಹದೀಸ್‌ನ ಮೂಲಕ ಮನವರಿಕೆ ಮಾಡಿಕೊಳ್ಳಬಹುದು. ಮುಆದ್ ಬಿನ್ ಜಬಲ್(ﷺ) ರವರಿಂದ ವರದಿ, "ಪ್ರವಾದಿ(ﷺ)ಯವರು ಕೇಳಿದರು, 'ಓ! ಮುಆದ್, ದಾಸರ ಮೇಲೆ ಭಾದ್ಯತೆಯಾಗಿರುವಂತಹ ಅಲ್ಲಾಹನ ಹಕ್ಕೇನು? ಮತ್ತು ಅಲ್ಲಾಹನ ಮೇಲೆ ಭಾದ್ಯತೆಯಾಗಿರುವಂತಹ ದಾಸರ ಹಕ್ಕೇನೆಂದು ನೀನು ಬಲ್ಲೆಯಾ?' 'ನಾನು (ಮುಆದ್) ಹೇಳಿದೆ, 'ಅಲ್ಲಾಹ್ ಮತ್ತು ಅವನ ಸಂದೇಶವಾಹಕರು

ಹೆಚ್ಚು ಬಲ್ಲವರಾಗಿದ್ದಾರೆ, ಅವರು ಪ್ರವಾದಿ (ﷺ) ಹೇಳಿದರು, 'ದಾಸರ ಮೇಲೆ ಭಾದ್ಯತೆಯಾಗಿರುವ ಅಲ್ಲಾಹನ ಹಕ್ಕೇನೆಂದರೆ ಅವನನ್ನು ಆರಾಧಿಸುವುದು ಹಾಗೂ ಅವನೊಂದಿಗೆ ಇನ್ನಾರನ್ನೂ ಭಾಗೀದಾರರನ್ನಾಗಿ ನಿಶ್ಚಯಿಸದಿರುವುದಾಗಿರುತ್ತದೆ. ಇನ್ನು ಅಲ್ಲಾಹನ ಮೇಲೆ ಭಾದ್ಯತೆಯಾಗಿರುವಂತಹ ದಾಸರ ಹಕ್ಕೇನೆಂದರೆ ಅವನೊಂದಿಗೆ ಇನ್ನಾರನ್ನೂ ಭಾಗೀದಾರರಾಗಿಸದವರನ್ನು (ಶಿರ್ಕ್ ಮಾಡದವರನ್ನು) ಶಿಕ್ಷಿಸದಿರುವುದು." {ಬುಖಾರಿ 2701, ಮುಸ್ಲಿಮ್ 677}

ಪ್ರವಾದಿವರ್ಯ(ﷺ) ಇಬ್ನು ಅಬ್ಬಾಸ್(ﷺ) ರವರಿಗೆ ಈ ರೀತಿ ಭೋಧಿಸಿದರು, "ಅಲ್ಲಾಹನ ಆದೇಶಗಳನ್ನು ನೀನು 'ಹಿಫ್‌ಝ್' (ಸ್ಮರಿಸು ಹಾಗೂ ಪಾಲಿಸು) ಮಾಡು, ಅವನು ನಿನ್ನನ್ನು 'ಹಿಫ್‌ಝ್' (ಪರಿಪಾಲನೆ ಹಾಗು ಸಹಾಯ) ಮಾಡುತ್ತಾನೆ. ನೀನು 'ಹಿಫ್‌ಝ್' ಮಾಡುವಿಯೆಂದಾದರೆ ಅಲ್ಲಾಹನನ್ನು ನೀನು (ಸಹಾಯ ಮತ್ತು ಜ್ಞಾನವನ್ನು ನೀಡಿ ರಕ್ಷಣೆ ಮಾಡುವವನಾಗಿ) ನಿನ್ನ ಜೊತೆ ಕಾಣುವೆ, ನೀನು ಪ್ರಾರ್ಥಿಸುವುದಾದರೆ ಅವನಲ್ಲೇ (ಅಲ್ಲಾಹನಲ್ಲೇ) ಪ್ರಾರ್ಥಿಸು, ನೀನು ಸಹಾಯ ಯಾಚಿಸುವುದಾದರೆ ಅವನಲ್ಲೇ ಸಹಾಯ ಯಾಚಿಸು. ನೀನು ಅರಿತುಕೊಳ್ಳು (ಮನುಷ್ಯರು ಹಾಗೂ ಜಿನ್ನುಗಳನ್ನೊಳಗೊಂಡ) ಇಡೀ ಸಮುದಾಯವು ನಿನಗೆ ಯಾವುದಾದರೂ ಒಳಿತನ್ನು ಮಾಡಬಯಸಿದರೂ ಅಲ್ಲಾಹನು ನಿನಗೆ ವಿಧಿಸಿದಷ್ಟನ್ನೇ ಹೊರತು ಬೇರ್‍ಯಾವ ಒಳಿತನ್ನೂ ಅವರು ಮಾಡಲಾರರು. ಇನ್ನು ಅವರೆಲ್ಲರೂ ಒಟ್ಟು ಸೇರಿ ನಿನಗ್ಯಾವುದಾದರೂ ಕೇಡನ್ನು ಬಗೆಯಲು ಇಚ್ಛಿಸಿದರೂ ಅಲ್ಲಾಹನು ನಿನಗೆ ವಿಧಿಸಿದ್ದಷ್ಟನ್ನೇ ಹೊರತು ಬೇರ್‍ಯಾವ ಕೇಡನ್ನೂ ಬಗೆಯಲಾರರು. ಲೇಖನಿಗಳು ಎತ್ತಲ್ಪಟ್ಟಿವೆ, ಪುಟಗಳು ಒಣಗಿವೆ." {ಮುಸ್ನದ್ ಅಹ್ಮದ್ 2669, ಸುನನುತ್ತಿರ್ಮಿದಿ 2516}

ಮತ್ತೊಂದೆಡೆ ಪ್ರವಾದಿ ಮುಹಮ್ಮದ್(ﷺ) ಹೇಳಿದರು, "ಯಾವ ಮುಸ್ಲಿಮನು ಅಲ್ಲಾಹನಲ್ಲಿ ಪ್ರಾರ್ಥಿಸುವಾಗ ಆ ಪ್ರಾರ್ಥನೆಯಲ್ಲಿ ಪಾಪದ ಬೇಡಿಕೆ ಅಥವಾ ಸಂಬಂಧ ಮುರಿಯುವಿಕೆಯ ಬೇಡಿಕೆಯಿಡುವುದಿಲ್ಲವೋ ಅವನಿಗೆ ಅಲ್ಲಾಹನು ಮೂರರಲ್ಲಿ ಒಂದನ್ನು ದಯಪಾಲಿಸುವನು. ಒಂದೋ ಅವನ ಪ್ರಾರ್ಥನೆಗೆ ಶೀಘ್ರವಾಗಿ ಓಗೊಡುವನು, ಇಲ್ಲವೇ ಅದನ್ನು ಆಖಿರತ್(ಪರಲೋಕ)ಗೆ ನಿಧಿಯಾಗಿಸಿ ಮುಂದೂಡುವನು, ಇಲ್ಲವೇ ಆ

ಪ್ರಾರ್ಥನೆಯು ಪ್ರಮಾಣದಲ್ಲಷ್ಟೇ ಇರುವ ವಿಪತ್ತೊಂದನ್ನು (ದುರಂತವೊಂದನ್ನು) ಅವನಿಂದ ಸರಿಸಿಬಿಡುವನು. 'ಆಗ ಅವರು [ಸಹಾಬಾಗಳು(ﷺ)]ಕೇಳಿದರು, 'ನಾವು ದುಆ(ಪ್ರಾರ್ಥನೆ)ವನ್ನು ಅಧಿಕಗೊಳಿಸಬಹುದೇ?' ಅವರು [ಪ್ರವಾದಿ(ﷺ)]ಉತ್ತರಿಸಿದರು, 'ಹಾಗಾದರೆ ಅಲ್ಲಾಹನ ಬಳಿ ನಿಮಗೆ ಇನ್ನಷ್ಟು ಇದೆ." {ಮುಸ್ನದ್ ಅಹ್ಮದ್}

ಮತ್ತೊಂದು ಹದೀಸ್ ಈ ರೀತಿಯಿದೆ. ಪ್ರವಾದಿ(ﷺ) ಹೇಳಿದರು, "ಯಾವುದೇ ಮುಂಜಾಗ್ರತೆಯು ಅಲ್ಲಾಹನ ವಿಧಿತೀರ್ಮಾನದಿಂದ ಯಾರನ್ನೂ ರಕ್ಷಿಸದು. ವಿಧಿಸಲ್ಪಟ್ಟಿರುವುದು ಹಾಗೂ ವಿಧಿಸಲ್ಪಡದಿರುವುದರ ವಿಚಾರದಲ್ಲಿ ಪ್ರಾರ್ಥನೆಯು ಪ್ರಯೋಜನಕರವಾಗಿದೆ, ಪ್ರಾರ್ಥನೆಯು ವಿಧಿಸಲ್ಪಟ್ಟಿರುವ ವಿಪತ್ತುಗಳನ್ನು ಎದುರಿಸಿ ಕಿಯಾಮತ್ (ಅಂತ್ಯ) ದಿನದವರೆಗೂ ಸೆಣಸುತ್ತದೆ." (ಹಸನ್) {ಸಹೀಹ್ ಅಲ್ ಜಾಮಿಈ 7739}

ಇದಕ್ಕೆ ಪೂರಕವಾಗಿ ಕುರ್‌ಆನ್ ಸೂಕ್ತವೊಂದು ನೋಡಿ:

﴿ وَإِن يَمْسَسْكَ ٱللَّهُ بِضُرٍّ فَلَا كَاشِفَ لَهُۥٓ إِلَّا هُوَ ۖ
وَإِن يُرِدْكَ بِخَيْرٍ فَلَا رَآدَّ لِفَضْلِهِۦ ۚ يُصِيبُ بِهِۦ مَن يَشَآءُ مِنْ عِبَادِهِۦ ۚ
وَهُوَ ٱلْغَفُورُ ٱلرَّحِيمُ ﴿١٠٧﴾ ﴾

"ಅಲ್ಲಾಹು ನಿಮಗೇನಾದರೂ ಕೆಡುಕನ್ನು ತಗುಲಿಸಿದರೆ ಅವನ ಹೊರತು ಇನ್ನಾರೂ ಅದನ್ನು ದೂರ ಮಾಡುವವರಿಲ್ಲ, ಮತ್ತು ಅವನು ನಿಮಗೇನಾದರೂ ಒಳಿತನ್ನು ತಲುಪಿಸಿದರೆ ಅವನ ಅನುಗ್ರಹವನ್ನು ತಡೆಯುವವರೂ ಯಾರೂ ಇಲ್ಲ. ಅವನು ತನಗಿಷ್ಟ ಬಂದವರಿಗೆ ತನ್ನ ಅನುಗ್ರಹವನ್ನು ನೀಡುತ್ತಾನೆ. ಅವನು ಅತ್ಯಂತ ಕ್ಷಮಿಸುವವನೂ, ಕರುಣಾಮಯಿಯೂ ಆಗಿದ್ದಾನೆ."

{ಸೂರ ಯೂನುಸ್:107}

# ಪರೀಕ್ಷೆ ಮತ್ತು ಶಿಕ್ಷೆಯ ನಡುವೆ

# ವ್ಯತ್ಯಾಸ ಗುರುತಿಸುವಿಕೆ

**ಅಲ್ಲಾಹನ ಆಜ್ಞಾನುವರ್ತನೆಯ ಸಂದರ್ಭದಲ್ಲಿ ಸಂಕಷ್ಟಗಳು ಬಾಧಿಸಿದರೆ, ಉದಾಹರಣೆಗೆ; ಅಲ್ಲಾಹನ ಪ್ರೀತಿಯಾಪೇಕ್ಷೆಯ ಪಥದಲ್ಲಿ ಮಾಡುವ ಹೋರಾಟದಲ್ಲಿ ಎದುರಾಗುವ ನೋವು, ಗಾಯಗಳು, ಅಲ್ಲಾಹನಿಗಾಗಿ ಹಿಜ್ರಾ (ಅಲ್ಲಾಹನ ಮಾರ್ಗದಲ್ಲಿ ವಲಸೆ ಹೋಗುವುದು) ಹೊರಟಾಗ ಉಂಟಾಗುವ ಆರ್ಥಿಕ ಹಾನಿ, ಸೊತ್ತುನಷ್ಟ, ಇಸ್ಲಾಮ್ ಸ್ವೀಕರಿಸಿದ ಕಾರಣ ಅಥವಾ ಪ್ರವಾದಿ(ﷺ) ಯವರ ಚರ್ಯೆಯನ್ನು ಪಾಲಿಸಲು ಶ್ರಮಿಸಿದ ಕಾರಣದಿಂದಾಗಿ ಉದ್ಯೋಗವನ್ನು ಕಳೆದುಕೊಳ್ಳುವುದು, ಇವೇ ಮುಂತಾದ ರೀತಿಯ ಸಂಕಷ್ಟಗಳು ಪರೀಕ್ಷೆಗಳಾಗಿವೆ. ಇಂತಹ ಪರಿಸ್ಥಿತಿಯನ್ನು ತಾಳ್ಮೆಯೊಂದಿಗೆ ಅಭಿಮುಖೀಕರಿಸುವವರಿಗೆ ಅಲ್ಲಾಹನ ಕಡೆಯಿಂದ ಯುಕ್ತ ಪ್ರತಿಫಲ ಲಭಿಸಲಿದೆ. ಇಂತಹ ಸಂದರ್ಭಗಳಲ್ಲಿ ಅಸಹನೆ ಹಾಗೂ ಮುಂಗೋಪತನವನ್ನು ಪ್ರದರ್ಶಿಸುವವರು ಅಲ್ಲಾಹನ ಕ್ರೋಧವನ್ನು ತಮ್ಮ ಮೇಲೆ ಆಹ್ವಾನಿಸಿಕೊಳ್ಳುತ್ತಾರೆ.**

**ಮದ್ಯಪಾನ, ಅಮಲು ಪದಾರ್ಥ ಸೇವನೆ, ವ್ಯಭಿಚಾರ ಮುಂತಾದ ಪಾಪಕೃತ್ಯಗಳ ಕಾರಣದಿಂದಾಗಿ ಅನಾರೋಗ್ಯದ ರೂಪದಲ್ಲಿ ಸಂಕಷ್ಟಗಳು ನಮ್ಮನ್ನು ಮುತ್ತಿಕೊಂಡರೆ ನಿಶ್ಚಯವಾಗಿಯೂ ಅದು ಅಲ್ಲಾಹನ ಶಿಕ್ಷೆಯಾಗಿದೆ. ಇಂತಹ ಸಂದರ್ಭದಲ್ಲಿ ಶೀಘ್ರಗತಿಯಲ್ಲಿ ಪಶ್ಚಾತ್ತಾಪದೊಂದಿಗೆ ಅಲ್ಲಾಹನಲ್ಲಿ ಕ್ಷಮೆಯಾಚಿಸಬೇಕಾಗಿದೆ. ಅನ್ಯತಃ ಈ ಲೋಕದ ಜೀವನವನ್ನು ಮುಗಿಸಿ ಪರಲೋಕಕ್ಕೆ ಕಾಲಿಟ್ಟರೆ ಅಲ್ಲಿನ ದುಸ್ಸಹ ಶಿಕ್ಷೆಯು ಇಹಲೋಕದ**

ಶಿಕ್ಷೆಗಿಂತಲೂ ಕಠಿಣವಾದ ಸಹಿಸಲಸಾಧ್ಯವಾಗದ ರೀತಿಯಲ್ಲಿರುತ್ತವೆ ಎಂದು ನಾವು ಅರಿತಿರಬೇಕು.

ನಮಗೊದಗುವ ಕಷ್ಟ ಹಾಗೂ ವ್ಯಥೆಗಳು ನಮ್ಮ ಯಾವುದೇ ಸತ್ಕರ್ಮ ಅಥವಾ ಪಾಪಕೃತ್ಯಗಳೊಂದಿಗೆ ಯಾವುದೇ ಸಂಭಂದವಿಲ್ಲದ ರೀತಿಯಲ್ಲಾಗಿದ್ದರೆ, ಉದಾಹರಣೆಗೆ; ವಿವಿಧ ರೀತಿಯ ಅಸ್ವಸ್ಥತೆ, ರೋಗಭಾದೆ, ಸಂತಾನನಷ್ಟ, ವ್ಯಾಪಾರದಲ್ಲಿ ಅಸಫಲತೆ ಇವೇ ಮುಂತಾದವುಗಳು ಮನುಷ್ಯನೊಬ್ಬನ ಪಾಲಿಗೆ ಬಂದರೆ ಅವನು ತನ್ನ ಗತಕರ್ಮಗಳನ್ನೊಮ್ಮೆ ಪುನರಾವಲೋಕಿಸಿಕೊಳ್ಳಬೇಕು. ಏಕೆಂದರೆ ಹೆಚ್ಚಿನ ಸಂದರ್ಭಗಳಲ್ಲಿ ವಿಪತ್ತುಗಳು ಮನುಷ್ಯನ ಕರ್ಮಗಳ ಫಲಿತಾಂಶವಾಗಿರುತ್ತದೆ. ಹಾಗಿಲ್ಲದಿದ್ದಲ್ಲಿ ಅಲ್ಲಾಹನು ಸಂಕಷ್ಟ ಹಾಗೂ ವಿಪತ್ತುಗಳ ಮುಖಾಂತರ ನಮ್ಮ ತಾಳ್ಮೆ ಹಾಗೂ ವಿಧೇಯತೆಯನ್ನು ಪರೀಕ್ಷಿಸಲುದ್ದೇಶಿಸಿದ್ದಾನೆಂದರ್ಥ.

ಅಲ್ಲಾಹನ ಸಂದೇಶವಾಹಕರು (ﷺ) ಹೇಳಿದರು:

"ಇಹಲೋಕದಲ್ಲಿ ಸುಖಕರ ಹಾಗೂ ಅನಾಯಾಸಕರವಾದ ಜೀವನವನ್ನು ಜೀವಿಸಿದ್ದ ನರಕವಾಸಿಯೊಬ್ಬನನ್ನು ಪರಲೋಕದಲ್ಲಿ ಕೇವಲ (ಒಂದೇ) ಒಂದು ಬಾರಿ ನರಕದಲ್ಲೊಮ್ಮೆ ಅಲ್ಪವಾಗಿ ಇಳಿಸಲಾಗುವುದು. ನಂತರ ಆತನಲ್ಲಿ ಕೇಳಲ್ಪಡುವುದು. "ಓ ಆದಮನ ಪುತ್ರನೇ, (ಐಹಿಕ ಜೀವನದಲ್ಲಿ) ನೀನು ಯಾವಗಲಾದರೂ ನೆಮ್ಮದಿಯನ್ನು ಮತ್ತು ಯಾವುದಾದರೂ ಸುಖವನ್ನು ಪಡೆದಿರುವೆಯಾ? ಆತನು ಉತ್ತರಿಸುವನು, 'ಅಲ್ಲಾಹನಾಣೆ, ಇಲ್ಲ ನನ್ನ ಪ್ರಭು!' ನಂತರ ಇಹಲೋಕದಲ್ಲಿ ಬಹುಕಷ್ಟಯುತವಾದ ಜೀವನವನ್ನು ಜೀವಿಸಿದ್ದ ಸ್ವರ್ಗವಾಸಿಯೊಬ್ಬನನ್ನು ಪುನರುತ್ಥಾನ ದಿನದಂದು ಸ್ವರ್ಗದಲ್ಲೊಮ್ಮೆ ಅಲ್ಪವಾಗಿ ಇಳಿಸಲಾಗುವುದು. ನಂತರ ಆತನಲ್ಲಿ ಕೇಳಲ್ಪಡುವುದು. 'ಓ ಆದಮನ ಪುತ್ರನೇ, (ಐಹಿಕ ಜೀವನದಲ್ಲಿ) ನೀನು ಯಾವುದಾದರೂ ವ್ಯಥೆ ಅಥವಾ ಸಂಕಟಗಳನ್ನು ಅನುಭವಿಸಿರುವೆಯಾ?'
ಆತನು ಉತ್ತರಿಸಲಿರುವನು, 'ಅಲ್ಲಾಹನಾಣೆ! ನಾನು ಯಾವುದೇ ವ್ಯಥೆ ಅಥವಾ ಸಂಕಟಗಳನ್ನು ಅನುಭವಿಸಿಲ್ಲ." [ಸಹೀಹ್ ಮುಸ್ಲಿಮ್ 6738}

# ಸದಾ ನೆನಪಿಡು

**ಕಷ್ಟ ಹಾಗೂ ಸುಖಗಳು ನಿನಗೊಂದು ಪರೀಕ್ಷೆಯಾಗಿದೆ.**

**ಅಲ್ಲಾಹನು ನಿನಗೆ ವಿಧಿಸಿದವುಗಳೆಲ್ಲವೂ; ಒಳಿತು ಅಥವಾ ಕೆಡುಕು, ಯಾವುದೇ ಆದರೂ ನಿನಗೆ ಒಳಿತಾಗಿದೆ.**

**ನಿನ್ನೊಂದಿಗೆ ಸಂಭವಿಸಿರುವುದು ತಪ್ಪಿಹೋಗಲು (ಸಂಭವಿಸದಿರಲು) ಸಾಧ್ಯವಿರಲಿಲ್ಲ, ಮತ್ತು ನಿನ್ನಿಂದ ತಪ್ಪಿ ಹೋದದ್ದು ನಿನಗೆ ಪಡೆಯಲೂ ಸಾಧ್ಯವಿರಲಿಲ್ಲ.**

**ಸಬ್ರ್ (ಸಹನೆ) ನಿರ್ಬಂಧವಾಗಿದೆ.**

**ಅಲ್ಲಾಹನ ವಿಧಿಯೊಂದಿಗೆ ತಾಳ್ಮೆಯನ್ನು ವಹಿಸಿದವರಿಗೆ ಮಾತ್ರ ಪ್ರತಿಫಲ ಲಭಿಸುವುದು.**

**ಗಾಬರಿಗೊಳ್ಳುವಿಕೆ ಮತ್ತು ಅಸಹನೆಯು ಅಲ್ಲಾಹನ ವಿಧಿಯನ್ನು ತಡೆಯಲಾರದು.**

**ಶಕ್ವಾ (ಆಕ್ಷೇಪಣೆ) ಸಬ್ರ್ (ತಾಳ್ಮೆ)ಗೆ ವಿರುದ್ಧವಾಗಿದೆ.**

**ನಿನ್ನನ್ನು ವಿಪತ್ತಿನಿಂದ ರಕ್ಷಿಸಬಲ್ಲವನು ಮತ್ತು ನಿನ್ನ ಕಷ್ಟಗಳನ್ನು ದೂರೀಕರಿಸಬಲ್ಲವನು ಅಲ್ಲಾಹನು ಮಾತ್ರ.**

**ಅಲ್ಲಾಹನ ಅನುಗ್ರಹ ಮತ್ತು ರಕ್ಷೆ ಅವನ ಪ್ರವಾದಿ(ﷺ)ಯವರ ಮೇಲೆ ಸದಾ ವರ್ಷಿಸುತ್ತಿರಲಿ.**